## ಅಧ್ಯಾಯ 10

# ನೋಹನ ಸಂತಾನದವರು

10ನೇ ಅಧ್ಯಾಯದಲ್ಲಿರುವ ಮಾಹಿತಿಯನ್ನು ಸಾಮಾನ್ಯವಾಗಿ "ದೇಶಗಳ ಕೋಷ್ಟಕ" ಎಂದು ಗುರುತಿಸಲಾಗಿರುತ್ತದೆ. ಈ "ಕೋಷ್ಟಕ" ಎಂಬ ಮಾತು ಒಂದು ಸಂಕ್ಷೆಪದ ಅಥವಾ ಸ್ಥೂಲ ನಿರೂಪಣೆಯ ಪಟ್ಟಿಯನ್ನು ಸೂಚಿಸುತ್ತದೆ. ಪಟ್ಟಿಯು ವಾಸ್ತವಿಕದಲ್ಲಿ "ಪ್ರಳಯವಾದ ಮೇಲೆ" ಇದ್ದ ನೋಹನ ಪುತ್ರರಿಗೆ ಏನು ಸಂಭವಿಸಿತು ಎಂಬುದನ್ನು ತಿಳಿಸುವಂಥ ಒಂದು ವಂಶಾವಳಿ ಆಗಿರುತ್ತದೆ (10:1, 32). ಲೇಖಕನು ಸೇತ್, ಹಾಮ್, ಮತ್ತು ಯೆಪೆತ್ ಇವರ ಮುಂದಾಳತ್ವದಲ್ಲಿರುವಂಥ ಮೂರು ಪ್ರಮುಖ ಕೊಂಬೆಗಳುಳ್ಳ ವಂಶವೃಕ್ಷವೊಂದನ್ನು ಮುಂದಿಡುತ್ತಾನೆ. ಈ ಕ್ರಮಾನುಸಾರವು ವಾಕ್ಯದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವದಾಗಿದ್ದು (5:32; 6:10; 7:13; 9:18; 10:1), ವಂಶಾವಳಿಯ ಕೊಂಬೆಗಳನ್ನು ತಿಳಿಸುವ ವೇಳೆ ಹಿಮ್ಮೋಗದ ಕ್ರಮದಲ್ಲಿ ಬರೆಯಲ್ಪಟ್ಟಿವೆ: ಯಾಪೆತ್ (10:2-5), ಹಾಮ್ (10:6-20), ಮತ್ತು ಶೆಮ್ (10:21-31).

ನೋಹನ ಪುತ್ರರನ್ನು ಪಟ್ಟಿಮಾಡಲಾಗಿರುವ ಕ್ರಮಾನುಸಾರವು ಕಾಲಾನುಕ್ರಮದ ಬದಲಾಗಿ ದೈವಶಾಸ್ತ್ರದ ಆಧಾರದಲ್ಲಿ ಮಾಡಲಾಗಿರುತ್ತದೆ (10:21ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಯಾಪೆತ್ ಮತ್ತು ಆತನ ಸಂತತಿಯವರು ಲೇಖಕನಿಗೆ ಅಷ್ಟೇನೂ ಪ್ರಾಮುಖ್ಯರಾಗಿರಲಿಲ್ಲ, ಯಾಕೆಂದರೆ ಪ್ರಾಚೀನ ಕಾಲದಲ್ಲಿ ಇಸ್ರಾಯೇಲ್ಯರು ಅವರೊಂದಿಗೆ ಬಹಳ ಕಡಿಮೆ ಸಂಪರ್ಕಗಳನ್ನು ಹೊಂದಿದ್ದರು. ಅವರ ಕುರಿತಾಗಿ ಹೆಚ್ಚು ಕ್ಲುಪ್ತವಾದ ರೀತಿಯಲ್ಲಿ ಮೊದಲು ಚರ್ಚೆ ಮಾಡಲಾಗಿರುತ್ತದೆ, ಕೇವಲ ಮೂರು ಪೀಳಿಗೆಯವರ ಬಗ್ಗೆ ಮಾತ್ರವೇ ಬರೆಯಲಾಗಿರುತ್ತದೆ.

ತರುವಾಯ, ಅಬ್ರಹಾಮನ ವಂಶದವರ ನಾಲ್ಕು ಪೀಳಿಗೆಯರ ಕುರಿತು ಪ್ರಸ್ತಾಪಿಸಲಾಗಿರುತ್ತದೆ ಯಾಕೆಂದರೆ ಅವರು ಬೈಬಲಿನ ಇತಿಹಾಸದಲ್ಲಿ, ಇಸ್ರಾಯೇಲ್ಯರಿಗೆ ಹೋರಾಟವನ್ನು ಎದುರಿಸುವಂತೆ ಮಾಡುವ ಜನಾಂಗಗಳಾಗಿ ವ್ಯಾಪಕವಾದ ರೀತಿಯಲ್ಲಿ ಕಾಣಿಸಿಕೊಳ್ಳುತ್ತಾರೆ. ಅವರೊಳಗೆ ಅತಿ ಪ್ರಧಾನವಾದವರೆಂದರೆ ಕಾನಾನ್ಯರು, ಐಗುಪ್ತರು, ಮತ್ತು ಬಾಬೆಲಿನವರು.

ಅಂತಿಮವಾಗಿ, ಶೇಮನ ಸಂತಾನದವರನ್ನು ಕೊನೆಯಲ್ಲಿ ಸೇರಿಸಲಾಗಿದೆ - ಆತನು ನೋಹನ ಕಿರಿಯ ಮಗನಾಗಿದ್ದನು ಎಂಬ ಕಾರಣಕ್ಕಾಗಿ ಅಲ್ಲ (9:24ರ ಪ್ರಕಾರವಾಗಿ, ಆ ಸ್ಥಾನವನ್ನು ಹಾಮನು ಆಕ್ರಮಿಸಿಕೊಂಡಿದ್ದಮನು), ಆದರೆ ಆತನು ಮೂಲಪಿತೃವಿನ ಅತ್ಯಂಥ ಪ್ರಾಮುಖ್ಯವಾದ ಮಗುವಾಗಿದ್ದನೆಂಬ ಕಾರಣಕ್ಕಾಗಿಯೇ ಆಗಿದೆ. ಈತನ ಸಂತತಿಯವರಲ್ಲಿ ಆರು ಪೀಳಿಗೆಯವರನ್ನು ಪ್ರಸ್ತಾಪಿಸಲಾಗಿರುತ್ತದೆ, ಯಾಕೆಂದರೆ ಅಂತಿಮವಾಗಿ ಅಬ್ರಹಾಮನು ಈ ವಂಶದಿಂದಲೇ ಬರುವವನಾಗಿದ್ದನಷ್ಟೆ; ಮತ್ತು ಈತನಿಂದಲೇ ಇಸ್ರಾಯೇಲ್ ಜನಾಂಗವು ಜನಿಸಿ ಬರಲಿತ್ತು!

ಜನಾಂಗಗಳ ಕೋಷ್ಟಕವು ಸರ್ವರನ್ನು ಒಳಗೊಂಡದ್ದಾಗಿರುವದರ ಬದಲಾಗಿ ಆಯ್ದ

ಕೆಲವರನ್ನು ಒಳಗೊಂಡಿರುತ್ತದೆ (7 x 10), ಅದು ಸಂಪೂರ್ಣತೆಯ, ಪೂರ್ಣತೆ, ಮತ್ತು ಸಮಗ್ರತೆಯ ಸಂಕೇತವಾಗಿದೆ.[1] ಈ ಸಂಖ್ಯೆಯು ಸೂಚಿಸುವದೇನೆಂದರೆ ನೋಹ ಮತ್ತು ಆತನ ಪುತ್ರರಿಗೆ ದೇವರು ಕೊಟ್ಟಿದ್ದ ಆಶೀರ್ವಾದವು ಪರಿಚಿತವಿದ್ದ ಇಡೀ ಜಗತ್ತಿಗೆ ವಿಸ್ತರಿಸಲ್ಪಟ್ಟಿತ್ತು ಎಂಬುದೆ (9:1, 19). ಲೇಖಕನು ಸಾಂಕೇತಿಕ ಸಂಖ್ಯೆಯಾದ "70"ಕ್ಕೆ ತಲುಪುವದಕ್ಕೋಸ್ಕರ ಕೆಲವರನ್ನು ಆಯ್ಕೆ ಮಾಡಿಕೊಂಡಿದ್ದನು ಎಂಬುದಕ್ಕೆ ಇನ್ನೊಂದು ಸೂಚನೆಯು ಪೆಲೆಗ ಮತ್ತು ಯೊಕ್ತಾನ ಎಂಬ ಏಬರನ ಇಬ್ಬರು ಪುತ್ರರಿಗೆ ಸಂಬಂಧಿಸಿರುತ್ತದೆ. ಆತನು ಯೊಕ್ತಾನನ ಹದಿಮೂರು ಮಕ್ಕಳ ಪಟ್ಟಿಯನ್ನು ಮಾಡಿದನಾದರೂ (10:25-29), ಆತನು ಪೆಲೆಗನ ಎಲ್ಲಾ ವಂಶಸ್ಥರನ್ನು ಮುಂದಿನ ಅಧ್ಯಾಯದ ತನಕವೂ ಉಳಿಸಿಟ್ಟುಕೊಂಡನು, ಅಲ್ಲಿ ಅವರ ವಂಶಾವಳಿಯನ್ನು ಅಬ್ರಹಾಮನ ಕಾಲದ ತನಕವೂ ಪಟ್ಟಿ ಮಾಡುತ್ತಾನೆ (11:18-26).

ಪ್ರಾಚೀನತೆಯ ಸಾಹಿತ್ಯದಲ್ಲಿ ಯಾವದೇ ಸಾಮ್ಯತೆಯನ್ನೂ ಹೊಂದಿಲ್ಲದ್ದಾಗಿ, ಜನಾಂಗಗಳ ಕೋಷ್ಟಕವು ಪ್ರಾಚೀನ ಜಗತ್ತಿನಲ್ಲಿ ವಿಶಿಷ್ಟವಾಗಿರುತ್ತದೆ. ವಿವಿಧ ಚರಿತ್ರೆಗಳು ನಗರಗಳ ಸ್ಥಾಪಕರ ಮತ್ತು ಅರಸರ ಹೆಸರುಗಳನ್ನು ತಿಳಿಸುತ್ತವೆ, ಅವರು ಸಾವಿರಾರು ಅಥವಾ ಹತ್ತಾರು ಸಾವಿರ ವರ್ಷಗಳ ಕಾಲ ಬದುಕಿದ್ದರು ಎಂದು ಹೇಳಲಾಗಿರುತ್ತದೆ. ಹೇಗೂ, ಎಲ್ಲರೂ ಅಲ್ಲದಿದ್ದಾಗ್ಯೂ, ಅವರೊಳಗೆ ಬಹಳಷ್ಟು ಮಂದಿ ಮೆಸಪೊತಾಮ್ಯದಲ್ಲಿನ ಪಟ್ಟಣದ ಒಡೆಯರು ತಾವೇ ಎಂದು ಕಾನೂನುಬದ್ಧವಾಗಿ ಹೇಳಿಕೊಳ್ಳಬೇಕೆಂದು ಮತ್ತು ಅವರ ನಾಗರೀಕತೆಯ ಕುರಿತಾದ ಮಹಿಮೆಕರವಾದ ಇತಿಹಾಸವನ್ನು ಸೃಷ್ಟಿಸಿಕೊಳ್ಳುವದಕ್ಕಾಗಿ ಅನಂತರದಲ್ಲಿ ಬಂದ ಪೀಳಿಗೆಯವರು ಸೃಷ್ಟಿಸಿಕೊಂಡಿರುವ ಕಾಲ್ಪನಿಕ ವ್ಯಕ್ತಿಗಳಾಗಿದ್ದರು ಎಂಬುದು ಸ್ಪಷ್ಟವಾಗಿರುತ್ತದೆ.

ಕೋಷ್ಟಕವು ಒಳಗೊಂಡಿರುವ ಭೌಗೋಳಿಕ ವ್ಯಾಪ್ತಿಯಲ್ಲಿ ಸಹ ಗಮನಾರ್ಹವಾದದ್ದಾಗಿದೆ. ಅದು ಉತ್ತರದ ಕಡೆಗೆ ಕಾವ್ಕಾಸಸ್ ಪರ್ವತಗಳಮ ವರೆಗೆ ಮತ್ತು ದಕ್ಷಿಣದ ಕಡೆಯಲ್ಲಿ ಅರಬ್ಬಿಯನ್ ಪರ್ಯಾಯ ದ್ವೀಪದ ವರೆಗೆ ಹರಡಿಕೊಂಡಿರುತ್ತದೆ. ಅದು ಇರಾನಿನ ಪ್ರಸ್ಥಭೂಮಿಯಷ್ಟು ಪೂರ್ವದ ದಿಕ್ಕಿಗೆ ಪಶ್ಚಿಮದ ಕಡೆಯಲ್ಲಿ ಗ್ರೀಸ್ ವರೆಗೆ ಮತ್ತು ಸಂಭಾವ್ಯವಾಗಿ ಪ್ರಾಚೀನ ತಾರ್ಸಿಸ್ ಪಟ್ಟಣವು ಸ್ಪೇನ್ ದೇಶದಲ್ಲಿಯೇ ಇದ್ದದ್ದಾಗಿದ್ದರೆ, ಅದು ಅಲ್ಲಿಯ ತನಕ ಸಹ ವಿಸ್ತರಿಸಿರುತ್ತದೆ.

ಕೋಷ್ಟಕವ ರಚನೆಗೊಂಡಿರುವ ವಿಧದಿಂದಾಗಿ ಇಂದು ವಾಚಕನಿಗೆ ಕೆಲವು ಸವಾಲುಗಳು ಎದುರಾಗುತ್ತವೆ. ಇದರ ಮಾಹಿತಿಯ ಉದ್ದೇಶವು ವಿವೇಚಿಸುವದಕ್ಕೆ ಸುಲಭವಾಗಿರುತ್ತದೆ ಯಾಕೆಂದರೆ ಕೋಷ್ಟಕವು ಕೇವಲ ವ್ಯಕ್ತಿಗಳು ಮತ್ತು ಅವರ ಸಂತತಿಯವರ ಪಟ್ಟಿ ಮಾತ್ರವೇ ಆಗಿರುವದಿಲ್ಲ. ವೈಯಕ್ತಿಕ ಹೆಸರುಗಳ ಜೊತೆಯಲ್ಲಿ, ಅದು ಈ ಗುಂಪುಗಳು ಜೀವಿಸುತ್ತಿದ್ದ ಜನಾಂಗಗಳ, ಗೋತ್ರಗಳ, ಪಟ್ಟಣಗಳ, ದೇಶಗಳ, ಮತ್ತು ಸ್ಥಳಗಳ ಹೆಸರುಗಳನ್ನು ಒಳಗೊಂಡಿರುತ್ತದೆ; ಕೆಲವು ಸಾರಿ ಒಂದು ಹೆಸರು ಒಬ್ಬ ವ್ಯಕ್ತಿಯದ್ದಾಗಿರಬಹುದು ಅಥವಾ ಒಂದು ಭೌಗೋಳಿಕ-ರಾಜಕೀಯ ಸಂಗತಿಯ ಹೆಸರಾಗಿರಬಹುದು.

ಪಟ್ಟಿಯು ಜನಾಂಗಗಳ ಗುಂಪನ್ನು ಒಳಗೊಂಡಿರುತ್ತದೆ, "ಮಾದಯ್" ಎಂಬಂತಹ ಗೋತ್ರಗಳ ಗುಂಪನ್ನು ಬಳಸುತ್ತದೆ, ಇದು ಮೇದ್ಯರನ್ನು ಸೂಚಿಸುತ್ತದೆ (10:2). ಪಟ್ಟಿಯಲ್ಲಿರುವಂಥ ದೇಶಗಳೊಳಗೆ ಹಲವಾರು ದೇಶಗಳಿಗೆ ಕೊನೆಯಲ್ಲಿ ವಿಶಿಷ್ಟವಾದ ಇಬ್ರಿಯ ಪುಲ್ಲಿಂಗ ִים *(-ಯಿಮ್)* ಪದವು ಇರುತ್ತದೆ: "ಕಿತ್ತೀಮ್," "ಲೂದ್ಯರು," "ಕಫ್ತೋರ್ಯರು" ಮತ್ತು ಇತ್ಯಾದಿ (10:4, 13, 14). ಜನರು ಇತರ ಹೆಸರುಗಳು ಇಬ್ರಿಯ ಭಾಷೆಯೊಳಗೆ ಕೊನೆಯಲ್ಲಿ ಒಂದು ಜನಾಂಗೀಕ ಪದವನ್ನು ִי *(-ಐ)* ಒಳಗೊಂಡಿರುತ್ತವೆ, ಅದಕ್ಕೆ ಆಂಗ್ಲದ ಸಮನಾರ್ಥ

ಪದವೆಂದರೆ "ಐಟ್," ಉದಾಹರಣೆಗೆ "ಯೆಬೂಸಿಯರು," "ಅಮೋರಿಯರು," "ಗಿರ್ಗಾಷಿಯರು," "ಹಿವ್ವಿಯರು," ಮತ್ತು "ಕಾನಾನ್ಯರು" (10:16-18). ಸ್ಥಳದ ಹೆಸರುಗಳು ಸಹ ಸೇರಿಸಲ್ಪಟ್ಟಿವೆ: "ಬಾಬೆಲ್" (ಬಾಬಿಲೋನ), "ನಿನೆವೆ" ಮತ್ತು ಇತ್ಯಾದಿಗಳು (10:10-12).[2]

5ನೇ ಅಧ್ಯಾಯದ ವಂಶಾವಳಿಯಲ್ಲಿರುವ ಪ್ರಕಾರವೇ, ಲೇಖಕನು ಇಂಥಿಂಥವನ "ಪುತ್ರರು" ಎಂದು ಉಲ್ಲೇಖಿಸಿದ ವೇಳೆ ಅಥವಾ "ಪಡೆದನು" ಎಂಬ ಪದಗುಚ್ಛವನ್ನು ಬಳಸಿದ ವೇಳೆ, ಈ ಮಾತುಗಳು ಅವಶ್ಯಕವಾಗಿ ತಕ್ಷಣದ ತಂದೆ/ಮಗನ ಸಂಬಂಧವನ್ನು ಸೂಚಿಸುವದಿಲ್ಲ. ಅವುಗಳ ಅರ್ಥವು ಕೆಲವು ಸಾರಿ ಒಬ್ಬ ಪ್ರಾಮುಖ್ಯವಾದ ವ್ಯಕ್ತಿಯು "ಪುತ್ರರು" ಎಂದು ಕರೆಯಲ್ಪಡುವ ಜನಾಂಗಗಳ ಗೋತ್ರಗಳ, ಅಥವಾ ದೇಶಗಳ "ತಂದೆ" (ಪೂರ್ವಜನು) ಆಗಿದ್ದನು ಎಂದಾಗಿರುತ್ತದೆ ಯಾಕೆಂದರೆ ಅವರು ಒಂದು ಕಾಲಾವಧಿಯಲ್ಲಿ ಅವನ ಸಂತತಿಯಿಂದ ಹುಟ್ಟಿ ಬಂದವರಾಗಿರುತ್ತಾರೆ.[3] ಇದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದಾಗಿದೆ, ಆದರೆ ಎರಡು ಉದಾಹರಣೆಗಳು ಸಾಕಾಗುತ್ತವೆ. "ಮಾದಯ್," ಅಂದರೆ ಮೇದ್ಯರು (10:2) ಯೆಫೆತನ ಮೂಲಕವಾಗಿ ಜನಿಸಿದ್ದರು ಮತ್ತು ಮೆಸಪೋತಾಮ್ಯದ ಮಹಾ ಕಣಿವೆಯ ಈಶಾನ್ಯದಲ್ಲಿ ವಾಸಿಸುತ್ತಿದ್ದರು. ಅದೇ ರೀತಿಯಲ್ಲಿಯೇ, "ಮಿಚ್ರಯಿಮ್" ಇಬ್ರಿಯ ಭಾಷೆಯಲ್ಲಿ ದ್ವಿಪದವಾಗಿರುತ್ತದೆ: ಹಾಮನ ಪುತ್ರರಲ್ಲೊಬ್ಬನು ಈ ಹೆಸರಿನಿಂದ ಕರೆಯಲ್ಪಟ್ಟಿದ್ದನು (10:6), ಆದರೆ ಅದು "ಐಗುಪ್ತ" ಎಂಬ ಅರ್ಥವನ್ನು ಸಹ ಹೊಂದಿರುತ್ತದೆ, ಅದು ಕೆಲವು ಸಾರಿ "ಹಾಮನ ದೇಶ" ಎಂದು ಕರೆಯಲ್ಪಟ್ಟಿರುತ್ತದೆ (ಕೀರ್ತನೆ 105:23, 27). ಇದು ಐಗುಪ್ತರು ವಾಸಿಸುತ್ತಿದ್ದ ಎರಡು ರಚನಾತ್ಮಕ ಘಟಕಗಳನ್ನು ಸೂಚಿಸುತ್ತದೆ: "ಐಗುಪ್ತದ ಒಳನಾಡು (ದಕ್ಷಿಣ ಐಗುಪ್ತ) ಮತ್ತು ಒಳ ಐಗುಪ್ತ (ನದೀ ಮುಖಜ ಭೂಮಿ)."[4]

ಕೋಷ್ಟಕರ ಇತರ ವೈಶಿಷ್ಟ್ಯತೆಗಳು ಗೊಂದಲಕರವಾಗಿವೆ. ಯೆಫೆತನ ಸಂತತಿಯವರು ಮುಖ್ಯವಾಗಿ ಕಾನಾನ್ ದೇಶದ (ಅನಂತರದಲ್ಲಿ ಇಸ್ರಾಯೇಲ್ ಅಥವಾ ಫಿಲಿಷ್ಟಿಯ ಎಂದು ಕರೆಯಲ್ಪಡುತ್ತದೆ) ಉತ್ತರ ಹಾಗೂ ಪಶ್ಚಿಮದ ಕಡೆಗಳಲ್ಲಿ ವಾಸಿಸುತ್ತಿದ್ದರೆ, ಹಾಮನಿಂದ ಹುಟ್ಟಿದ ಜನಾಂಗಗಳು ಕಾನಾನಿನ ದಕ್ಷಿಣದ ಕಡೆಯಲ್ಲಿ ಮತ್ತು ಶೇಮನ ಸಂತತಿಯವರು ಕಾನಾನಿನ ಪೂರ್ವ ದಿಕ್ಕಿನಲ್ಲಿರುವ ಸ್ಥಳವನ್ನು ಆಕ್ರಮಿಸಿಕೊಂಡಿದ್ದರು. ಹೇಗೂ, ಪಟ್ಟಿಯಲ್ಲಿ ಸ್ವಲ್ಪ ಮಟ್ಟಿಗೆ ಅತಿವ್ಯಾಪಿಸುವಿಕೆ ಸಂಭವಿಸುತ್ತದೆ, ಯಾಕೆಂದರೆ ಹವೀಲ (10:7, 29), ಶೆಬಾ (10:7, 28), ಮತ್ತು ಲೂದ್ ಅಥವಾ ಲೂದ್ಯರು (10:13, 22) ಇವರೆಲ್ಲರೂ ಹಾಮ ಮತ್ತು ಶೇಮ ಇಬ್ಬರ ಪಟ್ಟಿಯಲ್ಲಿಯೂ ಸೇರ್ಪಡೆಗೊಳಿಸಲ್ಪಟ್ಟಿದ್ದಾರೆ. ಇದಕ್ಕೆ ಕೊಡಬಹುದಾದ ಒಂದು ವಿವರಣೆಯು ಏನೆಂದರೆ ಒಬ್ಬ ಮಗನ ವಂಶದವರು ಆಯಾ ಸ್ಥಳದಲ್ಲಿ ಮುಂಚಿನ ಕಾಲವೊಂದರ ವೇಳೆ ವಾಸಿಸುತ್ತಿದ್ದು ಅನಂತರದಲ್ಲಿ ಅವರು ಮತ್ತೊಬ್ಬ ಮಗನ ಸಂತಾನದವರಿಂದ ಅಲ್ಲಿಂದ ಓಡಿಸಲ್ಪಟ್ಟಿರಬೇಕು ಎಂಬುದೆ. ಇತರ ವಂಶಾವಳಿಗಳಲ್ಲಿ ಸ್ಪಷ್ಟವಾಗಿರುವ ಪ್ರಕಾರ, ಹಾಮ ಮತ್ತು ಶೇಮನ ಕೆಲವು ವಂಶಸ್ಥರು ಒಂದೇ ರೀತಿಯ ಹೆಸರನ್ನು ಹೊಂದಿರಬಹುದಾಗಿದೆ; ಮತ್ತು ಏಕರೂಪದ ಹೆಸರುಗಳನ್ನು ಹೊಂದಿದ್ದ ಜನರು ಒಂದಿಷ್ಟು ಕಾಲ ಒಂದೇ ಸ್ಥಳದಲ್ಲಿ ನೆಲೆಸಿದ್ದಿರಬಹುದಾಗಿದೆ. ಈ ಜನರು ಅವಶ್ಯಕವಾಗಿ ಸಮಕಾಲೀನರಾಗಿದ್ದರು ಎಂದೇನೂ ಇಲ್ಲ. ವಿವಿಧ ಗುಂಪುಗಳು ಕಾಲದ ವಿವಿಧ ಹಂತಗಳಲ್ಲಿ ಆ ಸ್ಥಳದೊಳಗೆ ವಾಸಿಸಿ ಅಭಿವೃದ್ಧಿಗೊಂಡಿರುವ ಸಾಧ್ಯತೆಯಿದೆ.

ಜನಾಂಗಗಳ ಕೋಷ್ಟಕದಲ್ಲಿ ನೆಲೆಗೊಂಡಿದ್ದ ಭೌಗೋಳಿಕ ಪ್ರಾಂತ್ಯಗಳ ಮೇಲೆ ಒತ್ತು ಕೊಡಲಾಗಿರುತ್ತದೆ. ನಾವೆಯಿಂದ ಹೊರಗೆ ಬಂದ ಬಳಿಕ, ನೋಹನ ಪುತ್ರರು ಮತ್ತು ಅವರ ಕುಟುಂಬಗಳು ದೇವರ ಯೋಜನೆಯ ಪ್ರಕಾರವಾಗಿ "ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಲು"

(9:1) ಆರಂಭಿಸಿದ್ದರು, ಮೂಡಣ ಗೋಳಾರ್ಧದ ಕಡೆಗೆ ವಲಸೆ ಹೋಗಲಾರಂಭಿಸಿದ್ದರು. (ಇದೇ ವಿಧವಾದ ಭೌಗೋಳಿಕ ಪಟ್ಟಿಗಾಗಿ, ನೋಡಿರಿ 1 ಪೂರ್ವಕಾಲವೃತ್ತಾಂತ 1:4-23.)

## ನೋಹನ ವಂಶಾವಳಿಯ ದಾಖಲೆಗೆ ಒಂದು ಪರಿಚಯ (10:1)

**[1]ನೋಹನ ಮಕ್ಕಳಾದ ಶೇಮ್ ಹಾಮ್ ಯೆಫೆತರ ವಂಶದವರ ಚರಿತ್ರೆಯು - ಜಲಪ್ರಳಯವಾದ ಮೇಲೆ ಅವರಿಗೆ ಮಕ್ಕಳು ಹುಟ್ಟಿದರು.**

**ವಚನ 1.** ನಾವು ಈ ಮುಂಚೆ ನೋಡಿದ ಪ್ರಕಾರವಾಗಿ, ಲೇಖಕನು **ನೋಹ**[ನ] ವಂಶಾವಳಿಯ ಚರಿತ್ರೆಯನ್ನು (תּוֹלְדוֹת, ***ಟೋಲೆಡೊಥ)*** ಆತನ **ಮಕ್ಕಳ** ಕುರಿತಾಗಿ ಮತ್ತು **ಜಲಪ್ರಳಯವಾದ ಮೇಲೆ ಅವರಿಗೆ ಮಕ್ಕಳು ಹುಟ್ಟಿದರು** ಎಂಬುದರ ಬಗ್ಗೆ ಒಂದು ಹೇಳಿಕೆಯನ್ನು ನೀಡುತ್ತಾ ಆರಂಭಿಸುತ್ತಾನೆ. ದಾಖಲೆಯು ಸಾಮಾನ್ಯವಾಗಿರುತ್ತಿದ್ದ **ಶೆಮ್ ಹಾಮ್ ಯೆಪೆತ್** ಎಂಬ ಕ್ರಮಾನುಸಾರವನ್ನು ಹಿಮ್ಮೊಗವಾಗಿ ಬಳಸುತ್ತದೆ (ನೋಡಿರಿ 10:2, 6, 21), ಆದರೆ ಅದು ನಡುವೆ ಬಾಬೆಲ್ ಗೋಪುರಕ್ಕೆ ಸಂಬಂಧಿಸಿದ ಘಟನೆಯನ್ನು ಸೇರ್ಪಡೆಗೊಳಿಸುವ ಮೂಲಕ (11:1-9), ಆ ಇಬ್ಬರು ಮಕ್ಕಳ ವಂಶಾವಳಿಗಳನ್ನು ಪ್ರತ್ಯೇಕ ಸಹ ಮಾಡುತ್ತದೆ (10:21-31; 11:10-26). ಶೇಮನ ವಂಶದವರು, ಮಾತ್ರವಲ್ಲದೆ ಹಾಮ ಹಾಗೂ ಯೆಫೆತನ ವಂಶದವರು ಸಹ, "ಆಕಾಶವನ್ನು ಮುಟ್ಟುವ" (11:4) ಗೋಪುರವನ್ನು ಕಟ್ಟುವದಕ್ಕೆ ಪ್ರಯತ್ನಿಸುವ ಕಾರಣದಿಂದ ಉಂಟಾದ ಅಸ್ತವ್ಯಸ್ತತೆಯ ಫಲಿತವಾಗಿ ಜನಾಂಗಗಳು ಚದುರಿಸಲ್ಪಟ್ಟಾಗ ಅದರಲ್ಲಿ ಭಾಗವಾಗಿದ್ದರು.

## ಯೆಫೆತನ ಪುತ್ರರು (10:2-5)

**[2]ಯೆಫೆತನ ಸಂತಾನದವರು ಯಾರಂದರೆ - ಗೋಮೆರ್, ಮಾಗೋಗ್, ಮಾದಯ್, ಯಾವಾನ್, ತೂಬಲ್, ಮೆಷೆಕ್, ತೀರಾಸ್ ಎಂಬವರೇ. [3]ಗೋಮೆರನ ಸಂತಾನದವರು - ಅಷ್ಕೆನಸ್, ರೀಫತ್, ತೋಗರ್ಮ ಎಂಬವರು. [4]ಯಾವಾನನ ಸಂತಾನದವರು - ಎಲೀಷಾ, ತಾರ್ಷೀಷ್, ಕಿತ್ತೀಮ್, ದೋದಾ ಎಂಬ ಸ್ಥಳಗಳವರು; ಇವರು ಸಮುದ್ರದ ರೇವುಗಳಲ್ಲಿ ಹರಡಿಕೊಂಡರು. [5]ದೇಶಭಾಷಾ ಕುಲಜನಾಂಗಗಳ ಪ್ರಕಾರ [ಇವರೇ ಯೆಫೆತನ ವಂಶದವರು].**

**ವಚನ 2.** ನೋಹನ ಕುಟುಂಬದ ದಾಖಳೆಯು **ಯೆಫೆತನ** ಸಂತತಿಯವರಿಂದ ಆರಂಭಗೊಳ್ಳುತ್ತದೆ, ಆತನು ಯಾವ ಕ್ರಮಾಂಕದಲ್ಲಿ ಜನಸಿದನೆಂಬುದು ವಿವಾದಕ್ಕೊಳಗಾಗಿರುತ್ತದೆ (10:21ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಖಂಡಿತವಾಗಿಯೂ, ಯೆಫೆತನ ಮನೆಯವರು 9:27ರಲ್ಲಿ ನೋಹನು ನೀಡಿದ ಆಶೀರ್ವಾದಕ್ಕನುಗುಣವಾಗಿ ವಿಸ್ತಾರಗೊಳಿಸಲ್ಪಟ್ಟಿದ್ದರು.

5ನೇ ಅಧ್ಯಾಯದಲ್ಲಿನ ಚರ್ಚೆಯಲ್ಲಿ ಗಮನಿಸಿರುವ ಪ್ರಕಾರ, ಸಂಖ್ಯೆ "7" ಮತ್ತು ಅದರ ಅಪವರ್ತ್ಯವು ಆದಿಕಾಂಡ ಲೇಖಕನಿಗೆ, ಮಾತ್ರವಲ್ಲದೆ ಬೈಬಲಿನ ಇತರ ಲೇಖಕರಿಗೆ ಸಹ ವಂಶಾವಳಿಯ ವಿಷಯಗಳನ್ನು ಬರೆಯುವ ಕಾರ್ಯದಲ್ಲಿ ಮಹತ್ವಪೂರ್ಣವಾಗಿತ್ತು. ಜನಾಂಗಗಳ ಕೋಷ್ಟಕದಲ್ಲಿಯೂ ಇದು ಹಾಗೆಯೇ ಆಗಿರುತ್ತದೆ, ಅದು ಒಟ್ಟಾರೆ ಎಪ್ಪತ್ತು ಹೆಸರುಗಳನ್ನು ಒಳಗೊಂಡಿರುತ್ತದೆ (7 x 10). ಲೇಖಕನು ಮೊದಲು ಯೆಫೆತನ ಏಳು ಪುತ್ರರ ಪಟ್ಟಿ ಮಾಡುತ್ತಾನೆ; ಆದರೆ, ಅವರನ್ನು ಕೊಂಬೆಗಳಾಗಿ ವಿಂಗಡಿಸಿ, ಕೇವಲ ಗೋಮೆರನ

ಮೂವರು ಮೊಮ್ಮಕ್ಕಳನ್ನು ಮತ್ತು ಯಾವಾನನಿಂದ ವಂಶದಿಂದ ಬಂದ ನಾಲ್ಕು ಮೊಮ್ಮಕ್ಕಳನ್ನು ಮಾತ್ರವೇ ಪಟ್ಟಿಯಲ್ಲಿ ಸೇರಿಸುತ್ತಾನೆ. ಇತರ ಐವರು ಪುತ್ರರ ಯಾವದೇ ಮಕ್ಕಳು ಅಥವಾ ಮೊಮ್ಮಕ್ಕಳ ಹೆಸರುಗಳನ್ನು ತಿಳಿಸಿರುವದಿಲ್ಲ; ಆದದರಿಂದ, ಕೋಷ್ಟಕದಲ್ಲಿ ಆತನ ಸಂತತಿಯವರ ಸಂಖ್ಯೆಯು ಹದಿನಾಲ್ಕಕ್ಕೆ (7 ಪುತ್ರರು + 7 ಮೊಮ್ಮಕ್ಕಳು = 14) ಸೀಮಿತವಾಗಿರುತ್ತದೆ.[5]

ಯೆಫೆತನ ಮೊದಲ ಮಗನು **ಗೋಮೆರ**. ಆತನು ಯೆಹೆಜ್ಕೇಲ 38:6ರಲ್ಲಿ ಹೆಸರಿಸಲ್ಪಟ್ಟಿರುತ್ತಾನೆ, ಸ್ಪಷ್ಟವಾಗಿರುವಂತೆ ಅಶ್ಶೂರ್ಯರು *ಗಿಮ್ಮಿರ್ರೀ* (ಸಿಮ್ಮೆರಿಯನ್ನರು) ಎಂದು ಕರೆಯಲ್ಪಡುತ್ತಿದ್ದ ಜನಾಂಗವನ್ನು ಗುರುತಿಸುವದಕ್ಕಾಗಿ ಆತನ ಹೆಸರು ಪ್ರಸ್ತಾಪಿಸಲ್ಪಟ್ಟಿರುತ್ತದೆ. ಅವರು ಇಂಡೋ-ಯುರೋಪಿಯನ್ ಮೂಲದ ಒಂದು ಶಕ್ತಿಶಾಲಿ ಜನಾಂಗವಾಗಿದ್ದರು. ಅವರು ಕ್ರಿ.ಪೂ. ಎಂಟನೆಯ ಶತಮಾನದ ವೇಳೆ ಕಾವ್ಕಸಸ ಪರ್ವತಗಳ ಮೂಲಕವಾಗಿ ಸಾಗಿ ಎಲ್ಲವನ್ನೂ ಜಯಿಸಿಕೊಂಡಿದ್ದರು ಮತ್ತು ಅಶ್ಶೂರ್ಯದ ಸಾಮ್ರಾಜ್ಯಕ್ಕೆ ದೊಡ್ಡ ಅಪಾಯವನ್ನು ತಂದೊಡ್ಡಿದ್ದರು, ಆ ಸಾಮ್ರಾಜ್ಯವು ಆ ಸಮಯದಲ್ಲಿ ಮೆಸಪೋತಾಮ್ಯದಿಂದ ಪೂರ್ವದ ಕಡೆಗೆ ವಿಸ್ತರಿಸಿಕೊಳ್ಳುತ್ತಲಿತ್ತು. ಅವರು ಅಂತಿಮವಾಗಿ ಅವರು ಮೂಡಣ ದಿಕ್ಕಿನಲ್ಲಿರುವ ಆಸ್ಯ ಸೀಮೆಯಲ್ಲಿ (ಕಪ್ಪದೋಕ್ಯ) ನೆಲೆಗೊಂಡಿದ್ದರು.

**ಮಾಗೋಗ್** ಯಾರು ಎಂಬುದನ್ನು ಖಚಿತತೆಯೊಂದಿಗೆ ಗುರುತು ಹಿಡಿಯುವದು ಸಾಧ್ಯವಿಲ್ಲ; ಆದರೆ ಈ ಹೆಸರು ಸಹ ಇಸ್ರಾಯೇಲ್ಯರ ಉತ್ತರದ ದಿಕ್ಕಿನಲ್ಲಿರುವ ವೈರಿಗಳಲ್ಲಿ ಒಬ್ಬರೆಂದು "ಮೆಷೆಕ್" ಮತ್ತು "ತೂಬಲ್" ಎಂಬುವವರ ಜೊತೆಯಲ್ಲಿ ಒಟ್ಟಾಗಿ ಪಟ್ಟಿ ಮಾಡಲಾಗಿರುತ್ತದೆ (ಯೆಹೆಜ್ಕೇಲ 38:1-6; 39:1-6). ಅವರ ಸೈನ್ಯಗಳು ಯೆಹೆಜ್ಕೇಲ 38:6ರಲ್ಲಿ "ತೋಗರ್ಮ"ದೊಂದಿಗೆ ಸಂಬಂಧ ಹೊಂದಿರುತ್ತವೆ. ಅವರ ಅರಸನಾದ "ಗೋಗ್"ನು ಲೂದ್ಯವನ್ನು ಆಳ್ವಿಕೆ ಮಾಡುತ್ತಿದ್ದನು (ಕ್ರಿ.ಪೂ. 685-652), ಇದು ಪಶ್ಚಿಮ ಆಸ್ಯ ಸೀಮೆಯ ಅಯಗೇನ್ ಕರಾವಳಿಯಲ್ಲಿರುವ ಒಂದು ಪ್ರಾಂತ್ಯವಾಗಿತ್ತು. ಆತನನ್ನು ಗ್ರೀಕರು *ಗೀಗೆಸ* ಎಂದು ಮತ್ತು ಅಶ್ಶೂರ್ಯರು *ಗುಗು* ಎಂದು ಕರೆಯುತ್ತಿದ್ದರು. ಆದದರಿಂದ, ಯೆಫೆತನ ಈ ಸಂತತಿಯವರು ಗೋಮೆರನಿಂದ ಜನಿಸಿದ ಜನರಿಂದ ಬಹಳ ದೂರದಲ್ಲಿ ಪಶ್ಚಿಮದ ಕಡೆಗೆ ನೆಲೆಸಿದ್ದರೆಂಬುದು ಸ್ಪಷ್ಟವಾಗುತ್ತದೆ.

ನಂತರದ ಮಗನಾದ **ಮಾದಯ್** ಎಂಬುವನ ಹೆಸರು ಪ್ರಸ್ತಾಪಿಸಲ್ಪಟ್ಟಿದೆ, ಇದು "ಮೇದ್ಯರು" ಎಂಬ ರಾಷ್ಟ್ರೀಯ ಬಿರುದಿನಲ್ಲಿ ಪ್ರತಿಫಲಿಸಲ್ಪಟ್ಟಿರುತ್ತದೆ (2 ಅರಸು 17:6; ಎಸ್ತೇರಳು 1:3; ಯೆಶಾಯ 13:17; ಯೆರೆಮೀಯ 25:25; ದಾನಿಯೇಲ 8:20; 9:1). ಇವರು ಸುಮಾರು ಎರಡನೆಯ ಸಹಸ್ರಮಾನದ ಅಂತ್ಯದ ವೇಳೆ ಇರಾನಿನ ಪ್ರಸ್ಥಭೂಮಿಯಲ್ಲಿ ನೆಲೆಗೊಂಡಿದ್ದ ಮತ್ತೊಂದು ಇಂಡೋ-ಯುರೋಪಿಯನ್ ಜನಾಂಗ ಆಗಿದ್ದರು. ಅವರು ಒಂಭತ್ತನೆಯ ಶತಮಾನಕ್ಕೆ ಸೇರಿದ ಅಶ್ಶೂರ್ಯರ ಶಿಲಾಶಾಸನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದು, ಅದು ಶಾಲ್ಮನೆಸೆರ IIIನು ಉತ್ತರ ಇರಾನಿನಲ್ಲಿದ್ದ ನೆಲೆಸಿದ್ದವರ ವಿರುದ್ಧವಾಗಿ ದಾಳಿಗೆ ಬಂದದ್ದನ್ನು ದಾಖಲಿಸಿರುತ್ತದೆ.[6]

**ಯಾವಾನ**ನು ಪ್ರಾಚೀನ ಗ್ರೀಕ್ ಹಿನ್ನಲೆಯ ಗೋತ್ರದ ಐಯೊನಿಯ ಎಂಬುದಕ್ಕೆ ಸಂಬಂಧ ಪಟ್ಟಿರುತ್ತಾನೆ, ಅದು ಪ್ರಾಥಮಿಕವಾಗಿ ಆಸ್ಯ ಸೀಮೆಯ ಪಾಶ್ಚಾತ್ಯ ಕರಾವಳಿಯನ್ನು ಸೂಚಿಸುತ್ತಿದ್ದಾದರೂ, ಅನಂತರದಲ್ಲಿ ಮಹಾ ಆಯಗೇನ ಪ್ರಾಂತ್ಯವನ್ನು ಸೂಚಿಸುವದಾಗಿತ್ತು. ಐಯೊನಿಯದ ವ್ಯಾಪಾರಸ್ಥರು ತೂರ್ ದೇಶದ ಫೋಯುನಿಕ್ಯದವರೊಂದಿಗೆ (ಯೆಹೆಜ್ಕೇಲ 27:2, 13) ಮತ್ತು ಮೆಡಿಟೆರ್ರೇನಿಯನ್ ಸಮುದ್ರದ ಸುತ್ತಮುತ್ತಲಿನ ಇತರರೊಂದಿಗೆ ವ್ಯಾಪಾರ

ಮಾಡಿ ಅಭಿವೃದ್ಧಿಗೊಂಡರು. ದಾನಿಯೇಲನ ಪ್ರವಾದನೆಗಳ ಹೊತ್ತಿಗೆ, "ಯಾವಾನ" ಎಂಬುದು ಗ್ರೀಕರೊಂದಿಗೆ ಗುರುತಿಸಲ್ಪಡುವ ಪದವಾಗಿತ್ತು (ದಾನಿಯೇಲ 8:21; 10:20; 11:2). ಜೆಕರ್ಯನು ಅವರ ವಿರುದ್ಧವಾಗಿ ಪ್ರವಾದಿಸಿದನು (ಜೆಕರ್ಯ 9:13).

ಶಾಸ್ತ್ರಗಳಲ್ಲಿ ಸಾಮಾನ್ಯವಾಗಿ **ತೂಬಲ್** ಮತ್ತು **ಮೆಷೆಕ್** ಒಟ್ಟಿಗೆ ಕಾಣಿಸಿಕೊಳ್ಳುತ್ತಾರೆ (ಯೆಶಾಯ 66:19; ಯೆಜೆಜ್ಕೇಲ 27:13; 32:26; 38:2, 3; 39:1). ಈ ಹೆಸರುಗಳು ಕಪ್ಪು ಸಮುದ್ರಕ್ಕೆ ದಕ್ಷಿಣದಲ್ಲಿ, ಆಸ್ಯ ಸೀಮೆಯ ಮಧ್ಯಭಾಗ ಮತ್ತು ಪೂರ್ವ ದಿಕ್ಕಿನಲ್ಲಿ ನೆಲೆಸಿದ್ದ ಜನರನ್ನು ಪ್ರತಿನಿಧಿಸುತ್ತವೆ. "ತೂಬಲ್" ಅನೇಕ ಸಾರಿ ಅಕ್ಕಾಡಿಯರ *ತಾಬಾಲ್* ಎಂಬುದರೊಂದಿಗೆ ಸಂಬಂಧಗೊಳಿಸಲ್ಪಡುತ್ತದೆ, ಮತ್ತು "ಮೆಷೆಕ್" ಎಂಬುದು *ಮುಶ್ಕಿ* ಎಂಬುದರೊಂದಿಗೆ ಸಂಬಂಧ ಹೊಂದಿದೆ, ಇವರಿಬ್ಬರೂ ಅಶ್ಶೂರ್ಯರ ವೈರಿಗಳು ಮತ್ತು ಅವರ ಲೇಖನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತಾರೆ.

ಆದಿಕಾಂಡ 10:2 ಮತ್ತು 1 ಪೂರ್ವಕಾಲವೃತ್ತಾಂತ 1:5 ಮಾತ್ರವೇ ಬೈಬಲಿನಲ್ಲಿ **ತೀರಾಸ್** ಬಗ್ಗೆ ಮಾತಾಡುವ ವಾಕ್ಯಭಾಗಗಳಾಗಿವೆ. ಕೆಲವರು ಅದನ್ನು ಈಗಿನ ಈಶಾನ್ಯ ಗ್ರೀಸ್, ದಕ್ಷಿಣ ಬಲ್ಗೆರಿಯಾ, ಮತ್ತು ಯುರೋಪಿಯನ್ ತುರ್ಕಿ ಆಗಿರುವಂಥ ಬಾಲ್ಕಾನಾ ಪರ್ಯಾಯ ದ್ವೀಪದಲ್ಲಿರುವ ಪ್ರಾಚೀನ ಥ್ರಾಸದೊಂದಿಗೆ ಸಂಬಂಧಗೊಳಿಸುತ್ತಾರೆ; ಹೇಗೂ, ಇನ್ನು ಕೆಲವರು ಎತ್ರುಸ್ಕಾನರೊಂದಿಗೆ ಸಂಬಂಧಗೊಳಿಸುತ್ತಾರೆ, ಅವರು ಎಂಟನೆಯ ಶತಮಾನದ ಕ್ರಿ.ಪೂ. ಹೊತ್ತಿಗೆ ಇಟಲಿಯಲ್ಲಿ ತಮ್ಮನ್ನು ಸ್ಥಿರವಾಗಿ ನೆಲೆಗೊಳಿಸಿಕೊಂಡಿದ್ದರು.

**ವಚನ 3.** ಬಳಿಕ **ಗೋಮೆರನ ಸಂತಾನದವರು** ಪ್ರಸ್ತಾಪಿಸಲ್ಪಟ್ಟಿದ್ದು, ಆ ಪಟ್ಟಿಯಲ್ಲಿ **ಅಷ್ಕೆನಸ್** ಮುಂಚೂಣಿಯಲ್ಲಿರುತ್ತಾನೆ. ಯೆರೆಮೀಯ 51:27ರಲ್ಲಿ, ದೇವರು ಯೆರೆಮೀಯನಿಗೆ ಅಷ್ಕೆನಸ್, ಅರರಾಟ, ಮತ್ತು ಮಿನ್ನಿ ಇವರನ್ನು ಬಾಬೆಲಿನ ಮೇಲೆ ದಾಳಿ ಮಾಡುವದಕ್ಕೆ ಕರೆಯಿಸಬೇಕೆಂದು ಅಪ್ಪಣೆ ಕೊಟ್ಟನು. "ಅಷ್ಕೆನಜ್" ಎಂದು ಕರೆಯಲ್ಪಡುವ ಜನರು ಸಾಮಾನ್ಯವಾಗಿ ಮಾಜಿ ಸೋವಿಯತ್ ಯುನಿಯನ್ನದಲ್ಲಿರುವ ಅರ್ಮೆನಿಯ ಪ್ರಾಂತ್ಯಕ್ಕೆ ಸೇರಿರುವ *ಅಶ್ಕುಝಾ* (ಶಾಸ್ತ್ರೀಯ ಸ್ಕೈತಿಯನ್ನರು). ಹೆಚ್ಚುಕಡಿಮೆ ಯೆರೆಮೀಯನ ಪ್ರವಾದನೆಗಿಂತ ಒಂದು ಶತಮಾನದ ಮುಂಚೆ, ಅವರು ಅಶ್ಶೂರ್ಯರ ವಿರುದ್ಧ ಹೋರಾಡುತ್ತಿದ್ದ ಮಿನ್ನಿಯರ ಮೈತ್ರಿ ಪಡೆಗಳಾಗಿದ್ದರು ಎಂಬುದಾಗಿ ಅಕ್ಕಾಡಿಯನ್ನರ ಲೇಖನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾರೆ.

**ರೀಫತ್** ಎಂಬುದು 1 ಪೂರ್ವಕಾಲವೃತ್ತಾಂತ 1:6ರಲ್ಲಿ "ದೀಫತ್" ಎಂದು ಉಚ್ಚರಿಸಲ್ಪಟ್ಟಿದೆ. ಪ್ರಾಚೀನ ಹಸ್ತಪ್ರತಿಗಳ ಪುರಾವೆಯು ಈ ಹೆಸರಿನಲ್ಲಿ ಆರಂಭಿಕ ಪದವು "ದೀ" ಎಂಬುದರ ಬದಲಾಗಿ "ರೀ" ಎಂದಿರುತ್ತೆಂಬುದಕ್ಕೆ ಬಲವಾದ ಬೆಂಬಲವನ್ನು ಒದಗಿಸುತ್ತದೆ. ಇಬ್ರಿಯ ಪದವಾದ *ರೆಶ್* (ר) *ದಾಲೆಥ್* (ד) ಎಂಬುದರೊಂದಿಗೆ ನಿಕಟವಾಗಿ ಸಾಮ್ಯತೆಯನ್ನು ಹೊಂದಿದೆ, ಮತ್ತು ವಾಕ್ಯವನ್ನು ನಕಲು ಮಾಡುವ ವೇಳೆ ಸುಲಭವಾಗಿ ಲೇಖಕನೊಬ್ಬನು ತಪ್ಪಾಗಿ ಓದುವದಕ್ಕೆ ಸಾಧ್ಯವಿತ್ತು. "ರೀಫತ್" ಎಂಬುದು ಪ್ರಾಚೀನ ಮಧ್ಯಪ್ರಾಚ್ಯದ ಲೇಖನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ. Josephusನು ಅದನ್ನು ಪಾಫಲಗೊನಿಯನ್ನರೊಂದಿಗೆ[7] ಗುರುತಿಸಿದನು, ಇವರು ಕಪ್ಪು ಸಮುದ್ರದ ಬಿಥೂನ್ಯದಲ್ಲಿ ದಕ್ಷಿಣಕ್ಕಿರುವ ದಡಗಳಲ್ಲಿ ವಾಸವಾಗಿದ್ದರು; ಆದರೆ ಈ ಗುರುತಿಗೆ ಆತನು ಯಾವದೇ ಆಧಾರವನ್ನು ಒದಗಿಸಲಿಲ್ಲ.

**ತೋಗರ್ಮ** ಎಂಬುದು ಯೆಹೆಜ್ಕೇಲ 27:13, 14; 38:3-6ರಲ್ಲಿ ಯಾವಾನ, ಮೆಷೆಕ್, ತೂಬಲ್, ಮತ್ತು ಗೋಮೆರ ಇವರೊಂದಿಗೆ ಸಂಬಂಧ ಹೊಂದಿರುತ್ತದೆ. ಪ್ರಾಚೀನ

ಅಶ್ಶೂರ್ಯದ ಮತ್ತು ಹಿತ್ತೀಯರ ಲೇಖನಗಳಲ್ಲಿ ಕಾರ್ಕೆಮಿಶನ ಉತ್ತರಕ್ಕೆ ಹಾಗೂ ಹಲ್ಯಾದ ಒಳನಾಡು ಮತ್ತು ಯೂಫ್ರೇಟಿಸ್ ನದಿಗಳ ನಡುವೆ ಇದ್ದಂಥ *ತೆಗಾರಮಾ* ಎಂದು ಕರೆಯಲ್ಪಡುವ ನಗರ ಹಾಗೂ ಅದರ ಸುತ್ತಲಿನ ಭಾಗಗಳನ್ನು ಉಲ್ಲೇಖಿಸುತ್ತವೆ. ಪುನಃ, ಇದು ಗೋಮೆರನಿಂದ ಜನಿಸಿದ ಜನರ ಭೌಗೋಳಿಕ ಪ್ರಾಂತ್ಯಕ್ಕೆ ಸಮೀಪದಲ್ಲಿರುತ್ತದೆ, ಆದರೆ ಇದರ ಗುರುತು ಅನಿಶ್ಚಿತತೆಯಿಂದ ಕೂಡಿದೆ.

**ವಚನ 4.** ಕೋಷ್ಟಕವು **ಯಾವಾನನ ಸಂತಾನದವ**ರಲ್ಲಿ ನಾಲ್ವರು ಪುತ್ರರನ್ನು ಪಟ್ಟಿ ಮಾಡುವ ಮೂಲಕ ಮುಂದುವರೆಯುತ್ತದೆ. ಅವರೊಳಗೆ ಮೊದಲನೆಯವನು **ಎಲೀಷಾ** (ನೋಡಿರಿ ಯೆಹೆಜ್ಕೇಲ 27:7), ಅದು ಮತ್ತು *ಅಲಾಶಿಯಾ* ಒಂದೇ ಆಗಿರುತ್ತದೆ ಎಂದು ಅನೇಕರು ನಂಬುತ್ತಾರೆ. ಇದು ಪ್ರಾಚೀನ ಐಗುಪ್ತಕ್ಕೆ (ಸುಮಾರು ಕ್ರಿ.ಪೂ. ಹದಿನೈದನೆಯ ಶತಮಾನ) Tell el-Amarna ಹಲಿಗೆಗಳಲ್ಲಿ ಕುಪ್ರದ್ವೀಪವನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ.

ಹಳೆಯ ಒಡಂಬಡಿಕೆಯಲ್ಲಿ, **ತಾರ್ಷೀಷ** ಎಂಬುದು ಮೆಡಿಟೆರ್ರೇನಿಯನ್ ಸಮುದ್ರದಾಚೆಗೆ ಪಶ್ಚಿಮದ ಕಡೆಗೆ ಪ್ರಯಾಣಿಸುವ ಮೂಲಕ ತಲುಪಬಹುದಾದ ದೂರದ ಒಂದು ಬಂದರು ಎಂಬುದಾಗಿ ಪ್ರಸ್ತಾಪಿಸಲ್ಪಟ್ಟಿದೆ (ನೋಡಿರಿ ಯೋನ 1:3; 4:2). ಇದು ಸ್ಪೇನ್ ದೇಶದಲ್ಲಿರುವ ಟಾರ್ಟೆಸ್ಸೊಸ ಎಂಬ ಪ್ರಾಚೀನ ಪಟ್ಟಣದಂತೆಯೇ ಆಗಿರಬಹುದಾಗಿದೆ, ಅಲ್ಲಿ ಫೊಯಿನಿಕಿದವರು ಗಣಿ ಮತ್ತು ವ್ಯಾಪಾರದ ಪಟ್ಟಣವನ್ನು ಹೊಂದಿದ್ದರು (ನೋಡಿರಿ ಕೀರ್ತನೆ 72:10; ಯೆಶಾಯ 23:1, 6, 10; 66:19; ಯೆರೆಮೀಯ 10:9; ಯೆಹೆಜ್ಕೇಲ 27:12). ಕೆಲವರು ಇದನ್ನು ಬೇರೆ ತಾರ್ಷೀಷ ಎಂದು ಗುರುತಿಸುತ್ತಾರೆ, ಈ ತಾರ್ಷೀಷಗೆ ಸೊಲೊಮೋನ ಮತ್ತು ಇತರ ಅರಸರು ವ್ಯಾಪಾರದ ಕೆಲಸಗಳಿಗಾಗಿ ತಮ್ಮ ಹಡಗುಗಳನ್ನು ಎಚ್ಯೋನ್ಗೆಬೆರಿನಿಂದ ದಕ್ಷಿಣಕ್ಕೆ ಅರಬ್ಬಿಯ ಮತ್ತು ಆಫ್ರಿಕಾದ ಕರಾವಳಿಯುದ್ದಕ್ಕೂ ಇರುವ ಕೆಂಪು ಸಮುದ್ರದ ತನಕ ಕಳುಹಿಸುತ್ತಿದ್ದರು (1 ಅರಸು 10:22; 22:48; 2 ಪೂರ್ವಕಾಲವೃತ್ತಾಂತ 9:21; 20:36, 37). ಹಾಗಿದ್ದರೂ, ಕಾನಾನಿನ (ಅನಂತರದ ಇಸ್ರಾಯೇಲ್) ಮತ್ತು ಫೊಯಿನಿಕಿಯದ ಪಶ್ಚಿಮಕ್ಕೆ, ಮೆಡಿಟೆರ್ರೇನಿಯನ್ ಸಮುದ್ರದಾಚೆ ಮತ್ತು "ಸಮುದ್ರದ ರೇವುಗಳು" (10:5; "ಕರಾವಳಿಗಳು ಮತ್ತು ದ್ವೀಪಗಳು"; NEB) ದಾಟಿ ಇದ್ದಂಥ ತಾರ್ಷೀಷ ಉತ್ತಮ ಆಯ್ಕೆಯಾಗಿದೆ ಎಂದು ಕಾಣಿಸುತ್ತದೆ. ಇದು ವಿಶೇಷವಾಗಿ ಸತ್ಯವಾದದ್ದು ಯಾಕೆಂದರೆ ಆದಿಕಾಂಡದ ಲೇಖಕನು ಯಾವಾನನ ಸಂತತಿಯವರನ್ನು ಬಣ್ಣಿಸುತ್ತಿದ್ದಾನೆ, ಅವರಲ್ಲಿ ಅನೇಕರು ಆಸ್ಯ ಸೀಮೆತೆ ಕರಾವಳಿ ಪ್ರದೇಶಗಳಲ್ಲಿ ಮತ್ತು ಬಾಕ್ಕಾನಾ ಪರ್ಯಾಯದ್ವೀಪದಲ್ಲಿ, ಮಾತ್ರವಲ್ಲದೆ ಮೆಡಿಟೆರ್ರೇನಿಯನ್ ಮತ್ತು ಅಯಗೇನ ಸಮುದ್ರದ ದ್ವೀಪಗಳಲ್ಲಿ ನೆಲೆಗೊಂಡಿದ್ದರು.

**ಕಿತ್ತೀಮ್** ಬಹುಶಃ ಕಿತಿಯೊನ್ ಪಟ್ಟಣವನ್ನು ಸೂಚಿಸಬಹುದಾಗಿದೆ, ಅದು ಪ್ರಾಚೀನ ಫೊಯಿನಿಕಿಯದ ಶಿಲಾಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿರುತ್ತದೆ. ಇದರ ಭಗ್ನಾವಶೇಷಗಳು ಕುಪ್ರದ್ವೀಪದಲ್ಲಿರುವ ಆಧುನಿಕ ಲಾರ್ನಾಕಾ ಪಟ್ಟಣದ ಹತ್ತಿರದಲ್ಲಿರುತ್ತವೆ. ಹೇಗೂ, ಕಾಲವು ಗತಿಸಿದಂತೆ ಈ ಪಟ್ಟಣದ ಹೆಸರು ಇಡೀ ಪ್ರಾಂತ್ಯವನ್ನು ಸೂಚಿಸುವ ಬಿರುದಾಗಿ ಮಾರ್ಪಟ್ಟಿರಬಹುದು ಯಾಕೆಂದರೆ ಹಳೆಯ ಒಡಂಬಡಿಕೆಯಲ್ಲಿ ಅದರ ಕುರಿತಾಗಿರುವ ಬೇರೆ ಎಲ್ಲಾ ಉಲ್ಲೇಖಗಳು ಒಂದು ಪಟ್ಟಣದ ಬದಲಾಗಿ ಒಂದು ಪ್ರಾಂತ್ಯ ಅಥವಾ ಜನಾಂಗವನ್ನು ಬಣ್ಣಿಸುವದಕ್ಕೆ ಬಳಸಲ್ಪಟ್ಟಿರುತ್ತವೆ (ಅರಣ್ಯಕಾಂಡ 24:24; ಯೆಶಾಯ 23:1; ಯೆರೆಮೀಯ 2:10; ಯೆಹೆಜ್ಕೇಲ 27:6; ದಾನಿಯೇಲ 11:30).

ಯಾವಾನನ ಪುತ್ರರರಿಗೆ ಸಂಬಂಧಿಸಿದಂತೆ ಕೊಡಲಾಗಿರುವ ಕೊನೆಯ ಹೆಸರು

**ದೋದಾ**. ಬಹುಪಾಲು ಇಬ್ರಿಯ ಹಸ್ತಪ್ರತಿಗಳು ಈ ಪದವನ್ನು ಹೊಂದಿರುತ್ತವಾದರೂ, ಸಮಾರ್ಯದ ಪಂಚಪುಸ್ತಕ, LXX, ಮತ್ತು 1 ಪೂರ್ವಕಾಲವೃತ್ತಾಂತ 1:7ರಲ್ಲಿನ ಸಮಾನತೆಯುಳ್ಳ ವಾಕ್ಯಭಾಗ ಇವೆಲ್ಲವೂ "ದೋದಾನಿಮ್" ಎಂದು ಹೊಂದಿರುತ್ತವೆ. ಮತ್ತೊಂದಾವರ್ತಿ, ಹಸ್ತಪ್ರತಿ ನಕಲುಗಾರನ ಗೊಂದಲವು ಬಹಳಷ್ಟರ ಮಟ್ಟಿಗೆ ಇಬ್ರಿಯ ಅಕ್ಷರಗಳಾದ *ರೆಶ್* (ר) ಮತ್ತು *ದಾಲೆಥ್* (ד), "ರೀ" ಮತ್ತು "ದೀ" ಎಂಬುಗಳಲ್ಲಿರುವ ಸಾಮ್ಯತೆಯೇ ಆಗಿರಬಹುದಾಗಿದೆ. ಈ ಪ್ರಕರಣದಲ್ಲಿ, "ದೋದಾನಿಮ್" ಬದಲಾಗಿ "ರೋದಾನಿಮ್" ಎಂಬುದನ್ನು ಆಯ್ಕೆ ಮಾಡಿಕೊಂಡರೆ ಉತ್ತಮವಾಗಿರಬಹುದಾಗಿದೆ; ಮತ್ತು ಅದು ಸರಿಯಾದದ್ದಾಗಿದ್ದರೆ, ಆ ಸ್ಥಳವು ಬಹುಶಃ ಗ್ರೀಕ್ ದ್ವೀಪವಾದ ರೋದ ಆಗಿರುತ್ತದೆ, ಇದು ಆಸ್ಯ ಸೀಮೆಯ ಕರಾವಳಿಗೆ ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ಇರುತ್ತದೆ. "ದೋದಾನಿಮ್" ಎಂಬುದನ್ನು ಉಳಿಸಿಕೊಂಡರೆ, ಅದು ಎಲ್ಲಿದೆ ಎಂಬುದರ ಖಚಿತವಾದ ತಿಳುವಳಿಕೆಯು ನಮಗೆ ಸಿಕ್ಕುವದಿಲ್ಲ.

**ವಚನ 5.** ಈ ವಚನದಲ್ಲಿನ ಹೇಳಿಕೆಯು 20 ಮತ್ತು 31ನೇ ವಚನಗಳಲ್ಲಿ ಹಾಮ ಮತ್ತು ಶೇಮನ ಪುತ್ರರ ಕುರಿತು ಮುಕ್ತಾಯದ ಹೇಳಿಕೆಯಂತೆಯೇ ಇರುತ್ತದೆ. ಇಲ್ಲಿ ಲೇಖಕನು ಅಧ್ಯಾಯದ ಅಂತಿಮ ಮಾತುಗಳನ್ನು 10:32ರಲ್ಲಿ ಎದುರುನೋಡುತ್ತಿದ್ದನು. ಈ ಅಂತಿಮ ಯೋಚನೆಯು ಯೆಫೆತನ ಪುತ್ರರಿಗೆ (10:2) ಅನ್ವಯಿಸಬೇಕು ಹೊರತು ಕೇವಲ ಯಾವಾನನ ಮಕ್ಕಳಿಗೆ ಮಾತ್ರವೇ ಅಲ್ಲ (10:4). **ಇವರು** [ಯೆಫೆತನ ಸಂತತಿಯವರು] **ಸಮುದ್ರದ ರೇವುಗಳಲ್ಲಿ ಹರಡಿಕೊಂಡರು** ಎಂಬ ಹೇಳಿಕೆಯು ಸೂಚಿಸುವದೇನೆಂದರೆ ಈ ಜನರು ಬಹಳಷ್ಟು ಭಾಗ, ಮೂಲಪಿತೃಗಳ ಯುಗದ ವೇಳೆ ಇಸಾಕ ಮತ್ತು ಯಾಕೋಬರ ಮೂಲಕವಾಗಿ ಜನಿಸಿದ ಅಬ್ರಹಾಮನ ಸಂತಾನದವರೊಂದಿಗಿನ ನೇರವಾದ ಸಂಪರ್ಕಕ್ಕೆ ಬರದೆ ಅತಿ ದೂರಕ್ಕೆ ಒಯ್ಯಲ್ಪಟ್ಟಿದ್ದರು.ಅಷ್ಟುಮಾತ್ರವಲ್ಲದೆ, ಯೆಫೆತನಿಂದ ಹುಟ್ಟಿದವರು **ದೇಶಭಾಷಾ ಕುಲಜನಾಂಗಗಳ ಪ್ರಕಾರ** ಪ್ರತ್ಯೇಕಗೊಂಡಿದ್ದರು ಎಂಬುದಾಗಿ ಲೇಖಕನು ಹೇಳಿದನು. ಇದು ಸ್ಪಷ್ಟವಾಗಿ 11:1-9ರಲ್ಲಿ ಬಾಬೆಲ್ ಪಟ್ಟಣ ಮತ್ತು ಗೋಪುರಗಳನ್ನೊಳಗೊಂಡ ಘಟನೆಯ ನಂತರದಲ್ಲಿ ವಿವಿಧ ಭಾಷಾ ಗುಂಪುಗಳು ಚದುರಿಸಲ್ಪಟ್ಟಿದ್ದರ ಚಲನವಲನಗಳನ್ನು ಸೂಚಿಸುತ್ತದೆ.

## ಹಾಮನ ಪುತ್ರರು (10:6-20)

**6ಹಾಮನ ಸಂತಾನದವರು ಯಾರಂದರೆ - ಕೂಷ್, ಮಿಚ್ರಯಿಮ್, ಪೂತ್, ಕಾನಾನ್ ಎಂಬವರೇ. 7ಕೂಷನ ಸಂತಾನದವರು - ಸೆಬಾ, ಹವೀಲ, ಸಬ್ತಾ, ರಗ್ಮ, ಸಬ್ತಕಾ ಎಂಬ ಜನಾಂಗಗಳು. ರಗ್ಮ ಸಂತಾನದವರು - ಶೆಬಾ, ದೆದಾನ್ ಎಂಬ ಜನಾಂಗಗಳು. 8ಕೂಷನು ನಿಮ್ರೋದನನ್ನು ಪಡೆದನು. ಅವನು ಪರಾಕ್ರಮದಿಂದ ಮೊದಲನೆಯ ಭೂರಾಜನಾದನು. 9ಅವನು ಅತಿ ಸಾಹಸಿಯಾದ ಬೇಟೆಗಾರನು. ನಿಮ್ರೋದನಂತೆ ಅತಿ ಸಾಹಸಿಯಾದ ಬೇಟೆಗಾರನೆಂದು ಈಗಲೂ ಹೇಳುವದುಂಟಲ್ಲಾ. 10ಶಿನಾರ್ ದೇಶದಲ್ಲಿರುವ ಬಾಬೆಲ್, ಯೆರೆಕ್, ಅಕ್ಕದ್, ಕಲ್ನೇ ಎಂಬ ಪಟ್ಟಣಗಳೇ ಅವನ ರಾಜ್ಯದ ಮೂಲ ಪಟ್ಟಣಗಳು. 11ಅವನು ಆ ದೇಶದಿಂದ ಹೊರಟು ಅಶ್ಶೂರ್ ದೇಶಕ್ಕೆ ಬಂದು ನಿನೆವೆ, ರೆಹೋಬೋತೀರ್, ಕೆಲಹ ಎಂಬ ಪಟ್ಟಣಗಳನ್ನೂ 12ನಿನೆವೆಗೂ ಕೆಲಹಕ್ಕೂ ನಡುವೆ ಇರುವ ರೆಸೆನ್ ಪಟ್ಟಣವನ್ನೂ ಕಟ್ಟಿಸಿದನು. ಇದೆಲ್ಲಾ ಒಟ್ಟಾಗಿ ಮಹಾ ಪಟ್ಟಣವೆಂದು ಪ್ರಸಿದ್ಧವಾಗಿದೆ. 13ಮಿಚ್ರಯಿಮ್ಯರಿಂದ ಲೂದ್ಯರೂ ಅನಾಮ್ಯರೂ ಲೆಹಾಬ್ಯರೂ ನಫ್ತುಹ್ಯರೂ ಪತ್ರುಸ್ಯರೂ ಕಸ್ಲುಹ್ಯರೂ ಕಫ್ತೋರ್ಯರೂ ಹುಟ್ಟಿದರು.**

**[14]ಕಸ್ಲುಹ್ಯರ ಬಳಿಯಿಂದ ಫಿಲಿಷ್ಟಿಯರು ಹೊರಟುಬಂದರು. [15]ಕಾನಾನ್ ವಂಶದಲ್ಲಿ ಮೊದಲು ಹುಟ್ಟಿದವನು ಸೀದೋನ್; ಆಮೇಲೆ ಹೇತ್ ಹುಟ್ಟಿದನು. [16]ಇದಲ್ಲದೆ ಯೆಬೂಸಿಯರೂ ಅಮೋರಿಯರೂ ಗಿರ್ಗಾಷಿಯರೂ [17]ಹಿವ್ವಿಯರೂ ಅರ್ಕಿಯರೂ ಸೀನಿಯರೂ [18]ಅರ್ವಾದಿಯರೂ ಚೆಮಾರಿಯರೂ ಹಮಾತಿಯರೂ ಕಾನಾನನಿಂದ ಹುಟ್ಟಿದರು. ಕಾಲಕ್ರಮದಿಂದ ಈ ಕಾನಾನ್ ಕುಲಗಳವರು ಹರಡಿಕೊಂಡರು. [19]ಕಾನಾನ್ಯರ ಸೀಮೆಯು ಸೀದೋನ್ ಪಟ್ಟಣದಿಂದ ಗೆರಾರಿಗೆ ಹೋಗುವ ದಾರಿಯಲ್ಲಿರುವ ಗಾಜಾ ಪಟ್ಟಣದವರೆಗೂ ಮತ್ತು ಸೊದೋಮ್, ಗೊಮೋರ, ಅದ್ಮಾ, ಚೆಬೋಯಿಮ್ ಎಂಬ ಪಟ್ಟಣಗಳಿಗೆ ಹೋಗುವ ದಾರಿಯಲ್ಲಿರುವ ಲೆಷಾ ಊರಿನವರೆಗೂ ಇತ್ತು. [20]ಕುಲಭಾಷಾ ದೇಶಜನಾಂಗಗಳ ಪ್ರಕಾರ ಇವರೇ ಹಾಮನ ವಂಶದವರು.**

**ವಚನ 6. ಹಾಮ**ನ ಸಂತತಿಯವರನ್ನು ಈಗ ಪಟ್ಟಿ ಮಾಡಲಾಗಿರುತ್ತದೆ. ಹಾಮನ ಪುತ್ರರ ಕೋಷ್ಟಕವು 10:2ರಲ್ಲಿನ ಯೆಫೆತನ ಪುತ್ರರಂತೆಯೇ ಆರಂಭಗೊಳ್ಳುತ್ತದೆ, ಆದರೆ ಹಾಮನ ಸಂತಾನವು ದಕ್ಷಿಣದಿಂದ ಉತ್ತರದ ವರೆಗಿನ ಅವರ ನೆಲೆಗೊಂಡ ಭೌಗೋಳಿಕ ಕ್ರಮಾನುಸಾರದಲ್ಲಿ ಪಟ್ಟಿ ಮಾಡಲ್ಪಟ್ಟಿರುವಂತೆ ಕಾಣಿಸುತ್ತದೆ.

ಪಟ್ಟಿಯು **ಕೂಷ್** ಎಂಬ ಪುತ್ರ ಮತ್ತು ಭೌಗೋಳಿಕ ಪ್ರಾಂತ್ಯದೊಂದಿಗೆ ಆರಂಭಗೊಳ್ಳುತ್ತದೆ, ಅದು LXXನ ನಂತರದಲ್ಲಿ ಸಂಪ್ರದಾಯಿಕವಾಗಿ ಐಥಿಯೋಪ್ಯದೊಂದಿಗೆ ಸಂಬಂಧಗೊಳಿಸಲ್ಪಟ್ಟಿದೆ (ನೋಡಿರಿ ಯೆಶಾಯ 18:1; ಯೆರೆಮೀಯ 13:23; ಯೆಹೆಜ್ಕೇಲ 29:10; ಚೆಪನ್ಯ 3:10). ಪ್ರಾಚೀನ ಕಾಲದಲ್ಲಿ, ಐಥಿಯೋಪ್ಯವು ಇಂದು ಉತ್ತರದ ಸುಡಾನ್ ದೇಶವು ಒಳಗೊಂಡಿರುವ ಭಾಗದಲ್ಲಿ ಇತ್ತು. ಶಾಸ್ತ್ರೀಯ ಗ್ರೀಕ್ ಲೇಖಕರು ಈ ಸ್ಥಳವನ್ನು ನುಬಿಯಾ ಎಂದು ಕರೆಯುತ್ತಿದ್ದರು. "ಕೂಷ್" ಎಂಬುದು "ನೈಲ್ ನದಿಯ ಎರಡನೆಯ ಮತ್ತು ಮೂರನೆಯ ಜಲಪಾತಗಳ ನಡುವೆ ಇದ್ದ"[8] ಐಗುಪ್ತದಿಂದ ದಕ್ಷಿಣಕ್ಕಿದ್ದ ಜಿಲ್ಲೆಯನ್ನು ಕರೆಯುವದಕ್ಕೆ ಐಗುಪ್ತರು ಬಳಸುತ್ತಿದ್ದ ಸಾಮಾನ್ಯ ಪದವಾಗಿತ್ತು. 10:7-12ರಲ್ಲಿನ ಜನಾಂಗಗಳ ಕೋಷ್ಟಕವು ಒಂದು ಅರಬ್ಬಿಯನ್ ಕೂಷ್ ಮತ್ತು ಕಸ್ಸಿತ್ತಿಯರ ಕೂಷ್ (ಈ ಎರಡನೆಯವರು ಪ್ರಾಚೀನ ಬಾಬಿಲೊನ ಮತ್ತು ಅಶ್ಶೂರ್ಯರ್ಗಳನ್ನು ಆಳ್ವಿಕೆ ಮಾಡಿದ ದೇಶಗಳಾಗಿರುತ್ತವೆ) ಇರುವದಾಗಿ ಒಪ್ಪಿಕೊಳ್ಳುವಂತೆ ಕಾಣಿಸುತ್ತದೆ; ಅತಿ ಆರಂಭಿಕ ಕೂಷ್ಯರ ನೆಲೆಗಳು ಅರಬ್ಬಿಯ ಮತ್ತು ಮಸಪೋತಾಮ್ಯಗಳಲ್ಲಿದ್ದರೆ, ಹಾಮನ ಅನಂತರದ ಸಂತಾನದವರು ಕೆಂಪು ಸಮುದ್ರವನ್ನು ದಾಟಿ ಈಶಾನ್ಯ ಆಫ್ರಿಕಾದೊಳಗೆ (ಐಥಿಯೋಪ್ಯ) ವಲಸೆ ಹೋಗಿರಬಹುದಾಗಿದೆ.

**ಮಿಚ್ರಯಿಮ್** ಎಂಬುದು ವಾಸ್ತವಿಕದಲ್ಲಿ ಹಳೆಯ ಒಡಂಬಡಿಕೆಯಲ್ಲಿ ಐಗುಪ್ತ ಎಂಬುದಕ್ಕಿರುವ ಇಬ್ರಿಯ ಹೆಸರಿನ ಲಿಪ್ಯಂತರಣವಾಗಿರುತ್ತದೆ. ಇದು ದ್ವಿರೂಪವುಳ್ಳದ್ದಾಗಿದೆ ಯಾಕೆಂದರೆ ಐಗುಪ್ತವನ್ನು ಎರಡು ಭಾಗಗಳನ್ನು ಹೊಂದಿರುದಾಗಿ ಕಾಣಲಾಗುತ್ತದೆ: ಐಗುಪ್ತದ ಒಳನಾಡು ಮತ್ತು ಕೆಳ ಐಗುಪ್ತ.

**ಪೂತ್** ಅರ್ಥಮಾಡಿಕೊಳ್ಳು ಹೆಚ್ಚು ಕಷ್ಟಕರವಾಗಿರುತ್ತದೆ. ಯೆರೆಮೀಯನು "ಖೇಡ್ಯಸನ್ನದ್ಧರಾದ ಕೂಷ್ಯರು, ಪೂಟ್ಯರು" ಎಂಬುದಾಗಿ ಪ್ರಸ್ತಾಪಿಸಿದನು (ಯೆರೆಮೀಯ 46:9), ಮತ್ತು ಯೆಹೆಜ್ಕೇಲನು "ಕೂಷ್ಯರು, ಪೂಟ್ಯರು, ಲೂದ್ಯರು, ಬಗೆಬಗೆಯ ಸಕಲ ವಿದೇಶೀಯರು, ಕೂಬ್ಯರು" ಇವರನ್ನು ಸಂಬಂಧಗೊಳಿಸುತ್ತಾನೆ (ಯೆಹೆಜ್ಕೇಲ 30:5). ಈ ವಾಕ್ಯಗಳು ಪೂತ್‌ನ್ನು ಪಾಶ್ಚಾತ್ಯ ಅರಬ್ಬಿಯ ಅಥವಾ ಈಶಾನ್ಯ ಆಫ್ರಿಕಾದೊಂದಿಗೆ ಜೋಡನೆ ಮಾಡುತ್ತವೆ, ಮತ್ತು ನಮ್ಮ ಮುಂದಿರುವ ಈಗಿನ ವಾಕ್ಯಭಾಗದಲ್ಲಿಯೂ ಹೀಗೆಯೇ ಇರುವಂತೆ ತೋರುತ್ತದೆ. ಇನ್ನೊಂದೆಡೆಯಲ್ಲಿ, ಯೆಹೆಜ್ಕೇಲ 38:5ನೇ ವಚನವು ಪೂತ್‌ನ್ನು ಪರ್ಸಿಯ ಮತ್ತು

ಐಥಿಯೋಪ್ಯಗಳ (ಅಥವಾ ಕೂಷ್) ಜೊತೆಯಲ್ಲಿ ಪ್ರಸ್ತಾಪಿಸುತ್ತದೆ. ಪರ್ಸಿಯದೊಂದಿಗೆ ಸಂಬಂಧಗೊಳಿಸಿದ್ದು ಮೆಸಪೋತಾಮ್ಯದ ಕೂಷ್ ಪರೋಕ್ಷವಾಗಿ ಸೂಚಿಸುತ್ತಿರುವ ಸಾಧ್ಯತೆಯಿದೆ, ಪೂತ್‌ನ್ನು ಅರಬ್ಬಿಯ ಅಥವಾ ಆಫ್ರಿಕಾದ ಬದಲಾಗಿ ಆ ಪ್ರಾಂತ್ಯದ ಯಾವದಾದರೂ ಸ್ಥಳದಲ್ಲಿಡುವದಾಗಿದೆ.

ಹಾಮನ ಕೊನೆಯ ಮಗನು **ಕಾನಾನ** ಆಗಿದ್ದನು, ಇದು ಶಾಸ್ತ್ರಗಳಲ್ಲಿ "ಕಾನಾನ್ ದೇಶ" ಎಂದು ಪರಿಚಿತವಿರುವ ಭೌಗೋಳಿಕ ಸೀಮೆಯಲ್ಲಿ ನೆಲೆಗೊಂಡಿದ್ದ ಹಲವಾರು ಜನಾಂಗೀಯ ಗುಂಪುಗಳನ್ನು ಸೂಚಿಸುವ ಹೆಸರಾಗಿದೆ (ಯೆಹೆಜ್ಕೇಲ 16:3). ಖಂಡಿತವಾಗಿಯೂ, ಇದುವೇ ಅಬ್ರಹಾಮ ಮತ್ತು ಆತನ ಸಂತತಿಯವರಿಗೆ ವಾಗ್ದಾನ ಮಾಡಿದ್ದ ದೇಶವಾಗಿತ್ತು (12:1, 5; 13:7; 15:18-21; 17:8). ಕ್ರಮೇಣದಲ್ಲಿ, ಅದು ಇಸ್ರಾಯೇಲ್ಯರಿಂದ ಗೆದ್ದುಕೊಳ್ಳಲ್ಪಟ್ಟಿತ್ತು ಮತ್ತು ಇಸ್ರಾಯೇಲ್ ದೇಶವಾಗಿ ಮಾರ್ಪಟ್ಟಿತ್ತು (ಅನಂತರದಲ್ಲಿ "ಫಿಲಿಷ್ಟಿಯ" ಎಂದು ಕರೆಯಲ್ಪಟ್ಟಿತ್ತು).

**ವಚನ 7. ಕೂಷನ ಸಂತಾನದವರು** ಯಾರಾರೆಂದರೆ **ಸೆಬಾ** (ನೋಡಿರಿ ಕೀರ್ತನೆ 72:10; ಯೆಶಾಯ 43:3; 45:14), **ಹವೀಲ, ಸಬ್ತಾ, ರಗ್ಮ** (ನೋಡಿರಿ ಯೆಹೆಜ್ಕೇಲ 27:22), ಮತ್ತು **ಸಬ್ತಕಾ ಎಂಬ ಜನಾಂಗಗಳು**. ಈ ವ್ಯಕ್ತಿಗಳ ಕುರಿತು ನಮಗೆ ಹೆಚ್ಚುಕಡಿಮೆ ಏನೂ ಗೊತ್ತಿರುವದಿಲ್ಲ, ಅವರು ಈ ಸನ್ನಿವೇಶದಲ್ಲಿ ಆಫ್ರಿಕಾದ ಮತ್ತು ಅರಬ್ಬಿಯದ ಜನರೊಂದಿಗೆ ಮತ್ತು/ಅಥವಾ ಸ್ಥಳಗಳೊಂದಿಗೆ ಸಂಬಂಧ ಹೊಂದಿರುತ್ತಾರೆ ಎಂಬುದಷ್ಟೆ ತಿಳಿದಿರುತ್ತದೆ.

**ರಗ್ಮನ ಸಂತಾನದವರ**ಲ್ಲಿ ಮೊದಲನೆಯವನು **ಶೆಬಾ**. ಒಂದು ಪ್ರಾಚೀನ ಶಿಲಾಶಾಸನವು ಅರಬ್ಬಿಯದ ನೈಋುತ್ಯದಲ್ಲಿರುವ ಒಂದು ಪಟ್ಟಣವನ್ನು ಆ ಹೆಸರಿನಿಂದ ಪ್ರಸ್ತಾಪಿಸಯತ್ತದೆ, ಅದು ಇಂದು ಯಮೆನ್ ಎಂದು ಪರಿಚಿತವಿರುವಂಥ ಪ್ರಾಂತ್ಯವಾಗಿದ್ದಿರಬಹುದಾಗಿದೆ. ಇದು ಬಹುಶಃ ಶೆಬದ ರಾಣಿಯು ಆಳ್ವಿಕೆ ಮಾಡುತ್ತಿದ್ದ ಸಾಮ್ರಾಜ್ಯವಿರುವ ಸಾಮಾನ್ಯವಾದ ಸ್ಥಳವಾಗಿರಬಹುದು, ಯಾಕೆಂದರೆ ಅಶ್ಶೂರ್ಯದ ದಾಖಲೆಗಳು ಅಲ್ಲಿ ಆಳ್ವಿಕೆ ಮಾಡುತ್ತಿದ್ದ ರಾಣಿಯು ಬಂಗಾರ, ಸುಗಂಧದ್ರವ್ಯಗಳು, ರಕ್ತಬೋಳ, ಮಸಾಲಗಳು, ಮತ್ತು ಸುವಾಸನೆಯ ಕಟ್ಟಿಗೆಗಳ ವ್ಯಾಪಾರವನ್ನು ವ್ಯಾಪಕವಾಗಿ ಮಾಡುತ್ತಿದ್ದಳು ಎಂದು ತಿಳಿಸುತ್ತವೆ (1 ಅರಸು 10:1, 2, 10; ಯೆಶಾಯ 60:6; ಯೆರೆಮೀಯ 5:20; ಯೆಹೆಜ್ಕೇಲ 27:22).

ಅದೇ ರೀತಿಯಲ್ಲಿ, **ದೆದಾನ್** ಉತ್ತರದ ಅರಬ್ಬಿಯದ ಆಚೆಯಲ್ಲಿ ಮುಸುಕುಗಾಡಿಗಳ ವ್ಯಾಪಾರಕ್ಕೆ ಪ್ರಾಮುಖ್ಯವಾದ ಕೇಂದ್ರವಾಗಿತ್ತು (ಯೆಶಾಯ 21:13; ಯೆಹೆಜ್ಕೇಲ 27:15). ಅದು ಎದೋಮಿನ ಸೀಮೆಗೆ ಸಮೀಪವಾದ ಸ್ಥಳದಲ್ಲಿತ್ತು (ಯೆರೆಮೀಯ 49:8; ಯೆಹೆಜ್ಕೇಲ 25:13), ಮತ್ತು ಅದರ ವ್ಯಾಪಾರಸ್ಥರು ತೂರಿನ ಸಮುದ್ರ ಬಂದರು ನಗರದಲ್ಲಿ ಒಂದು ಲಾಭದಾಯಕ ವ್ಯಾಪಾರವನ್ನು ನಡಿಸುತ್ತಿದ್ದರು (ಯೆಹೆಜ್ಕೆಲ 27:15), ಅದರ ವ್ಯಾಪಾರಿಗಳು ಮೆಡಿಟೆರ್ರೇನಿಯನ್ ಸಮುದ್ರದಾಚೆಯ ವಿವಿಧ ಬಂದರುಗಳಿಗೆ ತಮ್ಮ ಸರಕುಗಳನ್ನು ಹಡಗುಗಳಲ್ಲಿ ಸಾಗಿಸುತ್ತಿದ್ದರು.

ಇಲ್ಲಿ ಒಂದು ಪ್ರಶ್ನೆಯು ಉದ್ಭವವಾಗುತ್ತದೆ ಯಾಕೆಂದರೆ ಆದಿಕಾಂಡ 10:6, 7 ವಚನಗಳು ಶೆಬಾ ಮತ್ತು ದೆದಾನ್ ಇವರನ್ನು ಹಾಮನ ಸಂತಾನದವರೆಂದು ಪಟ್ಟಿಮಾಡಿದರೆ, ಆದಿಕಾಂಡ 25:3 ಮತ್ತು 1 ಪೂರ್ವಕಾಲವೃತ್ತಾಂತ 1:32 ವಚನಗಳು ಶೆಬಾ ಮತ್ತು ದೆದಾನ್ ಇವರನ್ನು ಅಬ್ರಹಾಮ ಹಾಗೂ ಕೆಟೂರಳ ಮೊಮ್ಮಕ್ಕಳೆಂದು, ಶೇಮನ ಸಂತತಿಯಿಂದ ಬಂದವರೆಂದು ಹೆಸರಿಸುತ್ತದೆ (11:10-26). ನೋಹನ ಇಬ್ಬರು ಪುತ್ರರ ವಂಶದಲ್ಲಿ ಅದೇ ಹೆಸರುಗಳಿರುವಂಥದ್ದು ಅಪಾರ್ಥಮಾಡಿಕೊಂಡ ಪ್ರತಿರೂಪಗಳಿಗೆ ಒಂದು ಉದಾಹರಣೆಯಾಗಿದೆ; ಹೇಗೂ, ಹೆಸರುಗಳನ್ನು ಪುನರಾವರ್ತಿಸಿರುವುದು ಪರಸ್ಪರ ನಿಕಟವಾದ ಸಂಬಂಧವನ್ನು ಹೊಂದಿ ಮೂಲತಃ ಪ್ರತ್ಯೇಕವಾಗಿರುವ ಜನರೊಳಗೆ ಒಂದು

ಅಸಹಜವಾದ ವಿದ್ಯಮಾನವಾಗಿರುವದಿಲ್ಲ.[9]

**ವಚನ 8.** ನಂತರದಲ್ಲಿ ಇದಕ್ಕೆ ಮುಂಚೆ ಇದ್ದಂಥ ವಂಶಾವಳಿಗಳಿಗಿಂತಲೂ ಈ ವಂಶಾವಳಿಯ ಪಟ್ಟಿಯನ್ನು ವಿಶಿಷ್ಟವಾಗಿಸುವಂತಹ ಒಂದು ಕ್ಲುಪ್ತವಾದ ಕಥಾನಿರೂಪಣೆಯು ಬರುತ್ತದೆ. ಕೂಷ್‌ನ ಐವರು ಪುತ್ರರು ಮತ್ತು ಇಬ್ಬರು ಮೊಮ್ಮಕ್ಕಳನ್ನು ಈಗಾಗಲೇ ಪಟ್ಟಿ ಮಾಡಲಾಗಿತ್ತು, ಆದರೆ ಈಗ ಲೇಖಕನು ಹಿಂದಕ್ಕೆ ಹೋಗಿ **ಕೂಷ್‌ನ** ಆರನೆಯ ಮಗನನ್ನು ಪರಿಚಯಿಸುತ್ತಾನೆ, ಆತನ ಹೆಸರು **ನಿಮ್ರೋದ**. ಈ ಮುಂಚೆ ತಿಳಿಸಿರುವ ಪ್ರಕಾರ, ಒಬ್ಬ ವ್ಯಕ್ತಿಯನ್ನು **ಪಡೆದನು** ಅಥವಾ ಆತನು ಒಬ್ಬನ "ಮಗನಾಗಿದ್ದನು" ಎಂದು ಪ್ರಸ್ತಾಪಿಸುವುದು ಯಾವಾಗಲೂ ತಕ್ಷಣದ ಹೆತ್ತವರ/ಮಗುವಿನ ಸಂಬಂಧವನ್ನು ಸೂಚಿಸುವದಿಲ್ಲ; ಕೆಲವು ಸಾರಿ ಅದು ಕೇವಲ ಹೆಸರಿಸಲ್ಪಟ್ಟ ವ್ಯಕ್ತಿಯು ಒಬ್ಬ "ಮಗ"ನಿಂದ ಬಂದಂಥ ಪೂರ್ವಜನು - ಸಂಭಾವ್ಯವಾಗಿ ಹಲವಾರು ತಲೆಮಾರುಗಳಷ್ಟು ದೂರದಿಂದ ಬಂದವನು - ಅಥವಾ (ಸಂತತಿಯವನು) ಎಂಬುದನ್ನು ದೃಢಪಡಿಸುತ್ತದಷ್ಟೆ. "ನಿಮ್ರೋದ"ನ ವಿಷಯದಲ್ಲಿ ಇದು ಸತ್ಯವಾಗಿರಬಹುದಾಗಿದೆ.

ನಿಮ್ರೋದನನನ್ನು **ಪರಾಕ್ರಮಿ** (גִּבּוֹר, *ಗಿಬ್ಬರ)* **ಭೂರಾಜನು** ಅಥವಾ "ಪರಾಕ್ರಮಿ ಯುದ್ಧವೀರ" (NIV; NRSV). ಲೇಖಿನು 6:4, 5, 11ರಲ್ಲಿನ "ಪರಾಕ್ರಮಿಶಾಲಿಗಳ" ಸಂಗಡ ಈತನನ್ನು ಸಂಬಂಧಗೊಳಿಸುತ್ತಿರುವ ಸಾಧ್ಯತೆಯಿದೆ, ಅವರ ಹಿಂಸಾಚಾರವು ಪ್ರಳಯಕ್ಕೆ ದಾರಿ ಮಾಡಿತ್ತು. ಅಂತೂ, *ಗಿಬ್ಬರ* ಎಂಬ ಪದವು ಆದಿಕಾಂಡದೊಳಗೆ ಈ ಎರಡು ಸನ್ನಿವೇಶಗಳಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತದೆ. ಲೇಖಕನು ನಿಮ್ರೋದನನ್ನು ಅನೇಕ ಜನಾಂಗಗಳ ಮೇಲೆ ವಿಪರೀತ ಹಾನಿಯನ್ನು ಮಾಡಲಿದ್ದ ಮಧ್ಯಪ್ರಾಚ್ಯದ ಅರಸರ ಪಡಿಮಾದರಿ ಎಂಬ ರೀತಿಯಲ್ಲಿ ಮುಂದಿಡುತ್ತಿರಬಹುದಾಗಿದೆ.

**ವಚನ 9. ನಿಮ್ರೋದನನ್ನು ಯೆಹೋವ ದೃಷ್ಟಿಯಲ್ಲಿ ಸಾಹಸಿಯಾದ ಬೇಟೆಗಾರನು** ಎಂದು ಸಹ ಬಣ್ಣಿಸಲ್ಪಟ್ಟಿರುತ್ತಾನೆ. ಈತನನ್ನು ಅಶ್ಯೂರ್ಯ, ಬಾಬಿಲೊನ, ಅಥವಾ ಐಗುಪ್ತದ ಪ್ರಾಚೀನ ದೇವರುಗಳೊಂದಿಗೆ ಅಥವಾ ಅರಸರುಗಳೊಂದಿಗೆ ಗುರುತಿಸಲು ಹಲವಾರು ಪ್ರಯತ್ನಗಳನ್ನು ಮಾಡಲಾಗಿರುತ್ತದೆ, ಆದಾಗ್ಯೂ ಅಂತಹ ನಿರ್ಣಯಕ್ಕೆ ಬರುವುದು ಕಲ್ಪನಾತ್ಮಕವಾಗುತ್ತದೆ. ಹಾಗಿದ್ದರೂ, ಪ್ರಾಚೀನ ಮಧ್ಯಪ್ರಾಚ್ಯದ ಅರಸರನ್ನು ಅನೇಕ ಸಾರಿ ಅವರು ಕಾಡು ಮೃಗಗಳನ್ನು ಕೊಲ್ಲುವದರಲ್ಲಿ ಅವರಿಗಿರುವ ಸಾಹಸತನವನ್ನು ತೋರ್ಪಡಿಸಿಕೊಳ್ಳುತ್ತಿದ್ದರೆಂದು ಬಣ್ಣಿಸಲಾಗಿರುತ್ತದೆ. ಕ್ರೂರ ಮೃಗಗಳನ್ನು ನಾಶಗೊಳಿಸುವುದನ್ನು ಅವರಿಗಿರುವ ಎದೆಗಾರಿಕೆ ಮತ್ತು ಅವರ ಆಳ್ವಿಕೆಗೆ ಗಂಡಾಂತರವನ್ನು ತರಬಹುದಾದ ಯಾವದೇ ವೈರಿಗಳನ್ನು ನಾಶಮಾಡುವದರಲ್ಲಿ ಅವರಿಗಿರುವ ಸಾಮರ್ಥ್ಯಕ್ಕೆ ಪುರಾವೆ ಎಂಬಂತೆ ನೋಡಲಾಗುತ್ತಿತ್ತೆಂದು ಕಾಣಿಸುತ್ತದೆ. ಅಷ್ಟುಮಾತ್ರವಲ್ಲದೆ, ನಿಮ್ರೋದನ ಬೇಟೆಯಾಡುವದರಲ್ಲಿನ ಕುಶಲತೆಯನ್ನು "ಯೆಹೋವ ದೃಷ್ಟಿಯಲ್ಲಿ" ಎಂದಿರುವುದು ಈ ಕ್ಷೇತ್ರದಲ್ಲಿ ಆತನಿಗಿದ್ದ ಸಾಮರ್ಥ್ಯವನ್ನು ಯೆಹೋವನಿಂದ ದೊರೆತದ್ದು ಎಂಬುದಾಗಿ ಲೇಖಕನು ತಿಳಿಸುತ್ತಿದ್ದಾನೆಂದು ಸೂಚಿಸುತ್ತದೆ. ಇದರರ್ಥವು ನಿಮ್ರೋದ ಅಥವಾ ಇತರ ಅರಸರು ಇತಿಹಾಸದಲ್ಲಿ ಮಾಡಿರುವದನ್ನೆಲ್ಲಾ ಯೆಹೋವನು ಅನುಮೋದಿಸಿದನು ಎಂದಾಗಿರುವದಿಲ್ಲವಾದರೂ, ಆಳ್ವಿಕೆ ಮಾಡುವದಕ್ಕೆ ಅವರಿಗಿದ್ದ ಯಾವದೇ ಶಕ್ತಿಯು ದೇವರ ವರದಾನ ಆಗಿತ್ತೆಂಬುದನ್ನಂತೂ ಜ್ಞಾಪಿಸುತ್ತದೆ. ಬೈಬಲಿನುದ್ದಕ್ಕೂ, ಯೆಹೋವನು ತನ್ನ ಉದ್ದೇಶಗಳನ್ನು ನೆರವೇರಿಸುವದಕ್ಕಾಗಿ ಅರಸರನ್ನು ಎಬ್ಬಿಸಿದನು, ಮತ್ತು ಅವರ ನಾಯಕತ್ವದ ವರವನ್ನು ದುರ್ಬಳಕೆ ಮಾಡಿಕೊಂಡಾಗ ಅವರನ್ನು ಹೊಣೆಗಾರರನ್ನಾಗಿ ಸಹ ಮಾಡಿದನು.[10]

**ವಚನ 10.** ನಿಮ್ರೋದನ **ರಾಜ್ಯದ** ಪ್ರಮುಖ ನಗರಗಳು **ಶಿನಾರ್ ದೇಶದಲ್ಲಿ** ಇದ್ದವು, ದಕ್ಷಿಣ ಮೆಸಪೋತಾಮ್ಯದಲ್ಲಿನ ಪ್ರಾಚೀನ ಸುಮೆರ (ಅಥವಾ ಬಾಬಿಲೋನ) ಕ್ಷೇತ್ರವನ್ನು ಸೂಚಿಸುವದಕ್ಕೆ ಬಳಸುವ ಬೈಬಲಿನ ಪದವಾಗಿರುತ್ತದೆ.

ಪಟ್ಟಿಯಲ್ಲಿರುವ ಮೊದಲ ಹೆಸರು **ಬಾಬೆಲ್** (ಬಾಬಿಲೋನ; NIV), ಇದು ಯುಫ್ರೇಟಿಸ್ ನದಿಯ ಬಳಿಯಲ್ಲಿರುವ ಆಧುನಿಕ ಬಾಗ್ದಾದ್ ನಗರದಿಂದ ದಕ್ಷಿಣಕ್ಕೆ ಐವತ್ತು ಮೈಲಿಗಳಷ್ಟು ದೂರದಲ್ಲಿತ್ತು. 11:1-9ರಲ್ಲಿ ಬಾಬೆಲ್ ಗೋಪುರದ ಕಥೆಯನ್ನು ಎದುರುನೋಡುವದಾಗಿ ಬಾಬಿಲೋನ ಪಟ್ಟಣವು ಈ ಪಟ್ಟಿಯಲ್ಲಿ ಆದ್ಯತೆಯನ್ನು ಹೊಂದಿದೆ.[11]

**ಯೆರೆಕ್** (ಆಧುನಿಕ ವರ್ಕಾ) ಸುಮೆರಿಯನ್ನರಿಗೆ ಪ್ರಾಮುಖ್ಯವಾದ ಉರು (ಅಥವಾ ಉರುಗ್) ಮತ್ತು ಬಾಬಿಲೋನಿಯರಿಗೆ ಉರುಕ್ ಆಗಿತ್ತು. ಇದು ಬಾಗ್ದಾದ್‌ನಿಂದ ಸುಮಾರು 150 ಮೈಲಿಗಳಷ್ಟು ದೂರದಲ್ಲಿರುತ್ತದೆ.

**ಅಕ್ಕದ್** ("ಅಕ್ಕಡ" ಎಂದು ಸಹ ಉಚ್ಛರಿಸಲ್ಪಡುತ್ತದೆ) ಎಂಬುದು ಅಗಾದೆ ಎಂಬುದೇ ಆಗಿರುತ್ತದೆಂದು ಯೋಚಿಸಲಾಗುತ್ತದೆ, ಆದರೆ ಆ ಪಟ್ಟಣವು ಇದ್ದಂಥ ನಿಖರವಾದ ಸ್ಥಳವು ಇನ್ನೂ ಕಂಡು ಹಿಡಿಯಲ್ಪಟ್ಟಿರುವದಿಲ್ಲ. ಅಕ್ಕಡಿಯನ್ನರು ಭಾಷೆಗೆ ಈ ಅಕ್ಕದ್ ಹೆಸರನ್ನು ಕೊಡಲಾಗಿರುತ್ತದೆ ಮತ್ತು Sargon I ಎಂಬುವನಿಂದ ರಾಜಧಾನಿಯಾಗಿ ಬಳಸಲ್ಪಟ್ಟಿತ್ತು, ಈತನು ಕ್ರಿ.ಪೂ. 2350ರಲ್ಲಿ ಉತ್ತರದ ಮೆಸಪೋತಾಮ್ಯದಲ್ಲಿ ಒಂದು ಶಕ್ತಿಶಾಲಿ ಯೆಹೂದಿ ರಾಜವಂಶವನ್ನು ಸ್ಥಾಪಿಸಿದ್ದನು.

**ಕಲ್ನೇ**ಯ ಗುರುತು ಅನಿಶ್ಚಿತವಾಗಿದೆಯಾದರೂ, ಇದೇ ಹೆಸರಿನ ಪಟ್ಟಣವೊಂದನ್ನು ಆಮೋಸ 6:2ರಲ್ಲಿ ಪ್ರಸ್ತಾಪಿಸಲಾಗಿದೆ. ಎರಡು ಬೇರೆ ಬೇರೆ ಪಟ್ಟಣಗಳು ಚರ್ಚೆಯಲ್ಲಿರುವಂತೆ ಸಾಮಾನ್ಯವಾಗಿ ಭಾವಿಸಿಕೊಳ್ಳಲಾಗುತ್ತದೆ ಯಾಕೆಂದರೆ ಪ್ರವಾದಿಯು ಅಶ್ಶೂರ್ಯರಿಂದ ಗೆದ್ದುಕೊಳ್ಳಲ್ಪಟ್ಟ ಸಿರಿಯದ ಉತ್ತರದಲ್ಲಿದ್ದ ಪಟ್ಟಣಗಳ ಬಗ್ಗೆ ಮಾತಾಡುತ್ತಾನೆ, ಆದರೆ ಆದಿಕಾಂಡದಲ್ಲಿನ ಚರಿತ್ರೆಯಲ್ಲಿ ಮುಖ್ಯವಾದ ಗಮನವು ಸುಮೆರ ಹಾಗೂ ದಕ್ಷಿಣ ಬಾಬಿಲೋನಿನಲ್ಲಿರುವ ಪಟ್ಟಣಗಳ ಮೇಲೆ ಆಗಿರುತ್ತದೆ. ಈ ದಿನಾಂಕಕ್ಕೆ ಸಂಬಂಧ ಪಟ್ಟಂತೆ, ಈ ಹೆಸರಿನ ಯಾವದೇ ಪಟ್ಟಣವು ಈ ಯಾವ ಕ್ಷೇತ್ರಗಳಲ್ಲಿಯೂ ಕಂಡು ಹಿಡಿಯಲ್ಪಟ್ಟಿಲ್ಲ.

**ವಚನಗಳು 11, 12.** ಶಿನಾರ್ **ದೇಶದಿಂದ**, ನಿಮ್ರೋದನು **ಹೊರಟು ಅಶ್ಶೂರ್** (אַשּׁוּר, *ಅಶ್ಶೂರ)* **ದೇಶಕ್ಕೆ ಬಂದನು**. ಇಬ್ರಿಯ ಹೆಸರಾದ "ಅಶ್ಶೂರ" ಎಂಬುದು ಅಶ್ಶೂರ್ಯ ದೇಶವನ್ನು ಅಥವಾ ಅಶ್ಶೂರ್ಯದಲ್ಲಿ ಸ್ವಲ್ಪ ಕಾಲ ಅದರ ರಾಜಧಾನಿಯಾಗಿದ್ದ ಅದರಲ್ಲಿನ ಒಂದು ಪಟ್ಟಣವನ್ನು ಸೂಚಿಸುತ್ತಿರಬಹುದಾಗಿದೆ. ಇಲ್ಲಿ ನಿಮ್ರೋದನು ಅಶ್ಶೂರ್ಯದಲ್ಲಿ ಪ್ರಮುಖವಾದ ನಗರಗಳನ್ನು **ಕಟ್ಟಿಸಿದನು** ಎಂದು ಹೇಳಲಾಗಿರುತ್ತದೆ, ಮತ್ತು ಈ ವಿಚಾರವು ಮೀಕನು ಅಶ್ಶೂರ್ಯವನ್ನು "ನಿಮ್ರೋದ್ ಸೀಮೆ" ಎಂದು ಉಲ್ಲೇಖಿಸುವದರಲ್ಲಿ ಪ್ರತಿಬಿಂಬಿಸಲ್ಪಟ್ಟಿರುತ್ತದೆ (ಮೀಕ 5:6). ದಕ್ಷಿಣದಲ್ಲಿ ಸುಮೆರಿಯನ್ನ ಸಂಸ್ಕೃತಿಯಿಂದ ಉತ್ತರಕ್ಕೆ ಮೆಸಪೋತಾಮ್ಯದ ವರೆಗೆ ನಿಮ್ರೋದ್‌ನ ಸಂತತಿಯವರ ಭೌಗೋಳಿಕ ವಿಸ್ತರಣೆಯು ಪ್ರಾಚೀನ ಬೆಣೆಬರಹ ಲೇಖನಗಳಿಂದ ನಮಗೆ ತಿಳಿದಿರುವಂತಹ ಸಂಗತಿಗಳೊಂದಿಗೆ ಸಾಮಂಜಸ್ಯತೆಯಲ್ಲಿರುತ್ತದೆ.

ನಿಮ್ರೋದನು "ಹೊರಟು ಅಶ್ಶೂರ್ ದೇಶಕ್ಕೆ ಬಂದು," ಉತ್ತರದ ಟೈಗ್ರೀಸ್-ಯೂಫ್ರೇಟಿಸ್ ಕಣಿವೆಗೆ ಬಂದನು, ಮತ್ತು ತನ್ನ ಪ್ರಮುಖವಾದ ನಗರಗಳನ್ನು ಕಟ್ಟಿಸಿದನು. **ನಿನೆವೆ** ಮೊದಲು ಪ್ರಸ್ತಾಪಿಸಲ್ಪಟ್ಟಿದ್ದು, ಇದು ಟೈಗ್ರೀಸ್ ನದಿಯ ಪೂರ್ವ ದಿಕ್ಕಿನ ಕಡೆಯಲ್ಲಿ ನಿರ್ಮಿಸಲ್ಪಟ್ಟಿತು. ಆಧುನಿಕ ಮೊಸುಲ ನೇರವಾಗಿ ನದಿಗೆ ಪಶ್ಚಿಮದ ಕಡೆಯಲ್ಲಿರುತ್ತದೆ. ನಿನೆವೆಯು ಕ್ರಿ.ಪೂ.

ಎಂಟನೆಯ ಮತ್ತು ಏಳನೆಯ ಶತಮಾನಗಳಲ್ಲಿ ಅಶ್ಶೂರ್ಯ ಸಾಮ್ರಾಜ್ಯದ ಮಹಾ ರಾಜಧಾನಿಯಾಗಿತ್ತು, ಕೊನೆಗೆ ಅದನ್ನು ಕ್ರಿ.ಪೂ. 612ರಲ್ಲಿ ಬಾಬಿಲೋನ ಮತ್ತು ಮೇದ್ಯರ ಸೈನ್ಯಗಳು ಒಟ್ಟುಗೂಡಿ ನಾಶಗೊಳಿಸಿದ್ದರು.

**ರೆಹೋಬೋತೀರ್** ಒಂದು ಪಟ್ಟಣದ ಹೆಸರಾಗಿರಬಹುದು, ಆದರೆ ಕೆಲವು ಭಾಷಾತಜ್ಞರು ಯೋಚಿಸುವದೇನೆಂದರೆ ಅದು "ಪಟ್ಟಣದ ವಿಸ್ತಾರವಾದ [ತೆರೆದ] ಸ್ಥಳಗಳು [ಅಂಗಡಿಬೀದಿಗಳು]" ಎಂದು ಅನುವಾದಿಸಲ್ಪಡತಕ್ಕದ್ದು ಎಂಬುದೆ, ಅದು ನಿನೆವೆಯನ್ನು ಒಂದು ವಿಸ್ತಾರವಾಗಿ ಸಾರ್ವಜನಿಕ ಚೌಕಗಳೆಂದು ಸೂಚಿಸುವದಾಗುತ್ತದೆ.[12]

12ನೇ ವಚನದ ಪ್ರಕಾರ, **ರೆಸೆನ್** ಎಂಬುದು **ನಿನೆವೆಗೂ ಕೆಲಹಕ್ಕೂ ನಡುವೆ** ಇತ್ತು. ಈ ಮಾಹಿತಿಯಿರುವದರ ಹೊರತಾಗಿಯೂ ಇದು ಯಾವ ಸ್ಥಳದಲ್ಲಿರುವದೆಂಬುದು ತಿಳಿಯದೆ ಉಳಿದಿರುತ್ತದೆ.

ಆಧುನಿಕ ನಿಮ್ರೋದ ಪಟ್ಟಣವಾಗಿರುವ, **ಕೆಲಹ**ವು ಸಹ ಅಶ್ಶೂರ್ಯದ ರಾಜಧಾನಿಗಳಲ್ಲೊಂದು ಆಗಿತ್ತು. ಇದು ಟೈಗ್ರೀಸ್ ಮತ್ತು ಝಾಬ ನದಿಗಳು ಒಂದಾಗಿ ಕೂಡಿಕೊಳ್ಳುವ ಸ್ಥಳದಲ್ಲಿ ಸ್ಥಾಪಿಸಲ್ಪಟ್ಟಿತ್ತು. 12ನೇ ವಚನದ ಕಡೆಯ ಭಾಗದಲ್ಲಿ, ಇಬ್ರಿಯ ಭಾಷೆಯ ಸ್ವಾಭಾವಿಕ ಅಕ್ಷರ ಕ್ರಮವು ನಿನೆವೆಯನ್ನು ಅಲ್ಲ, ಆದರೆ ಕೆಲಹವನ್ನು **ಮಹಾ ಪಟ್ಟಣ** ಎಂದು ಸೂಚಿಸುತ್ತದೆ. "ಕೆಲಹ"ವು "ಮಹಾ ಪಟ್ಟಣ" ಎಂಬ ಗುಣವಾಚಕ ಪದಗುಚ್ಛದ ತಕ್ಷಣದ ಪೂರ್ವಗಾಮಿ ಪದಪುಂಜವಾಗಿರುತ್ತದಾದರೂ, ನಿನೆವೆಯು ಅಲ್ಲಿ ಪೂರ್ವಗಾಮಿ ಪದಪುಂಜ ಆಗಿರಬೇಕೆಂಬ ಇಂಗಿತವು ಇರುವ ಸಾಧ್ಯತೆಯಿದೆ, ಯಾಕೆಂದರೆ ಅದೇ ಮಾತನ್ನು ಯೋನ 1:2; 3:3; 4:11ರಲ್ಲಿ ಅದಕ್ಕೆ ಅನ್ವಯಿಸಲಾಗಿರುತ್ತದೆ. ಹೇಗೂ, ಕೆಲಹವನ್ನು ಒಂದು ಆದಿ ಕಾಲದಲ್ಲಿ ಆ ಮಾತುಗಳಿಂದ ಬಣ್ಣಿಸಿರುವ ಸಾಧ್ಯತೆಯು ಅಧಿಕವಾಗಿರುತ್ತದೆ, ಆ ಕಾಲದಲ್ಲಿಯೇ ಆದಿಕಾಂಡದ ಲೇಖಕನು ಬರೆಯುತ್ತಿದ್ದಿರಬಹುದು, ಯಾಕೆಂದರೆ ಕ್ರಿ.ಪೂ. ಎಂಟನೆಯ ಶತಮಾನದಲ್ಲಿ ಮಾತ್ರವೇ ನಿನೆವೆಯು ಅಷ್ಟೊಂದು ಎತ್ತರಕ್ಕೆ ಬೆಳೆದಿತ್ತು.[13]

**ವಚನಗಳು 13, 14.** ಈ ವಚನಗಳಲ್ಲಿ ಪಟ್ಟಿ ಮಾಡಲಾಗಿರುವ ಎಲ್ಲಾ ಹೆಸರುಗಳು ಇಬ್ರಿಯ ಬಹುವಚನವಾದ ים *(-ಯಿಮ್)* ಎಂಬುದರಿಂದ ಮುಕ್ತಾಯಗೊಳ್ಳುತ್ತವೆ, ಅದು ಸೂಚಿಸುವದೇನೆಂದರೆ ಲೇಖಕನು ವ್ಯಕ್ತಿಗಳನ್ನಲ್ಲ ಆದರೆ **ಮಿಚ್ರಯಿಮ್** ಅಥವಾ ಐಗುಪ್ತದಲ್ಲಿ ನೆಲೆಗೊಂಡವರಿಂದ ಉದಯಿಸಿದ ಜನರ ಗುಂಪುಗಳನ್ನು ಸೂಚಿಸುತ್ತಿದ್ದಾನೆ. ಇವರೊಳಗೆ ಪ್ರಥಮರೆಂದರೆ **ಲೂದ್ಯರು**; ಇವರು ಆಸ್ಯ ಸೀಮೆಯಲ್ಲಿ ನೆಲೆಗೊಂಡ ಗುಂಪುಗಳೊಂದಿಗೆ (ಯೆಶಾಯ 66:19),[14] ಮಾತ್ರವಲ್ಲದೆ ಕೆಲವು ಆಫ್ರಿಕಾದ ಜನರೊಂದಿಗೆ ಸಂಬಂಧಗೊಳಿಸಲ್ಪಟ್ಟಿರುತ್ತಾರೆ (ಕೂಷ್ ಮತ್ತು ಪೂತ್‌ರು; ಯೆರೆಮೀಯ 46:9; ಯೆಹೆಜ್ಕೇಲ 30:5). ಅವರು ಯಾರೆಂಬುದಾಗಿ ನಿಖರವಾಗಿ ಗುರುತನ್ನು ಹಿಡಿಯುವದಕ್ಕೆ ಸಾಧ್ಯವಿರುವದಿಲ್ಲ. **ಅನಾಮ್ಯ**ರ ವಿಷಯದಲ್ಲಿಯೂ ಅಷ್ಟೇ ಸತ್ಯವಾಗಿರುತ್ತದೆ, ಆದಾಗ್ಯೂ ಇವರು ನೈಲ್ ನದೀ ಮುಖಜ ಭೂಮಿಯ ಪಶ್ಚಿಮದ ಕಡೆಯಲ್ಲಿರುವ ಉತ್ತರ ಆಫ್ರಿಕಾದಲ್ಲಿನ ಕುರೇನ್ಯದ ಜನರಾಗಿರಬಹುದು ಎಂಬುದಾಗಿ ಕೆಲವರು ಯೋಚಿಸುತ್ತಾರೆ. **ಲೆಹಾಬ್ಯ** ಎಂಬುದು "ಲೂಬಿಮ್" ಎಂದು ಉಚ್ಚರಿಸುವ ಪರ್ಯಾಯ ವಿಧವೆಂದು ಯೋಚಿಸಲಾಗುತ್ತದೆ, ಲಿಬ್ಯದ ಮರುಭೂಮಿಯ ಗೋತ್ರದ ಜನರನ್ನು ಸೂಚಿಸುವದಾಗಿದೆ, ಇದು ಸಹ ಉತ್ತರ ಆಫ್ರಿಕಾದಲ್ಲಿರುತ್ತದೆ. ಪುನಃ, ಇದು ನಿಖರವಾಗಿರುತ್ತದೆಂಬುದಕ್ಕೆ ನಮಗೆ ಯಾವದೇ ಭರವಸವಿರುವದಿಲ್ಲ. ಅದೇ ರೀತಿಯಲ್ಲಿಯೇ **ನಫ್ತುಹ್ಯರು** ಯಾರೆಂದು ತಿಳಿದು ಬಂದಿರುವದಿಲ್ಲ, ಆದರೆ ಬಹುಶಃ ಅವರನ್ನು ಕೆಳ ಐಗುಪ್ತದ (ಉತ್ತರ) ಕಡೆಯ ನೈಲ್ ನದೀ ಮುಖಜ ಭೂಮಿಯಲ್ಲಿನ ಕ್ಷೇತ್ರಗಳೊಂದಿಗೆ

ಸಂಬಂಧಗೊಳಿಸತಕ್ಕದ್ದೆಂದು ತೋರುತ್ತದೆ.[15]

ಇತರ ವಾಕ್ಯಭಾಗಗಳ ಪ್ರಕಾರ, **ಪತ್ರುಸ್ಯರು** ಐಗುಪ್ತದ ಒಳನಾಡಿನಲ್ಲಿ (ದಕ್ಷಿಣ) ವಾಸಿಸುತ್ತಿದ್ದರು (ಯೆಶಾಯ 11:11; ಯೆರೆಮೀಯ 44:1, 15; ಯೆಹೆಜ್ಕೇಲ 29:14; 30:14). **ಕಸ್ಲೂಹ್ಯರ** ವಿಷಯದಲ್ಲಿ ಪುರಾವೆಗಳ ಕೊರತೆಯಿರುವ ಕಾರಣದಿಂದಾಗಿ ಕೇವಲ ಊಹೆಗಳನ್ನು ಮಾಡಿಕೊಂಡು ಅವರನ್ನು ಮೆಡಿಟೆರ್ರೇನಿಯನ್ ಪ್ರಾಂತ್ಯದುದ್ದಕ್ಕೂ ಇರುವ ವಿವಿಧ ಜನರ ಗುಂಪುಗಳೊಂದಿಗೆ ಗುರುತಿಸುವಿಕೆಯು ಸಂಭವಿಸಿರುತ್ತದೆ. ಹೇಗೂ, ನಿಜವಾದ ಪ್ರಶ್ನೆಯು ಮುಂದಿನ ಪರಿಚ್ಛೇದದಿಂದ ಉದ್ಭವವಾಗುತ್ತದೆ: **ಬಳಿಯಿಂದ ಫಿಲಿಷ್ಟಿಯರು ಹೊರಟುಬಂದರು**. ಈ ಮಾತುಗಳನ್ನು ತಪ್ಪಾದ ಸ್ಥಳದಲ್ಲಿ ಹಾಕಲಾಗಿರುತ್ತದೆಂದು ಕಾಣಿಸುತ್ತದೆ; ಅವುಗಳನ್ನು **ಕಫ್ತೋರ್ಯರು** (ಕ್ರೇತ್‌ದವರು) ಎಂಬುದರ ನಂತರದಲ್ಲಿರಬೇಕಾಗಿತ್ತು ಎಂಬುದಾಗಿ ಕೆಲವರು ಯೋಚಿಸುತ್ತಾರೆ ಯಾಕೆಂದರೆ ಫಿಲಿಷ್ಟಿಯರು ಕಫ್ತೋರ್ಯರಿಂದ ಉಗಮವಾಗಿರುತ್ತಾರೆಂದು ಹೇಳಲಾಗಿರುತ್ತದೆ (ಯೆರೆಮೀಯ 47:4; ಆಮೋಸ 9:7). ಕಸ್ಲೂಹ್ಯರೊಂದಿಗೆ ಮತ್ತು ಕಫ್ತೋರ್ಯರೊಂದಿಗೆ ಫಿಲಿಷ್ಟಿಯರ ಸಂಬಂಧವನ್ನು ಹೇಗೆ ವಿವರಿಸಲು ಸಾಧ್ಯ?

ಒಂದು ಸಾಧ್ಯತೆಯು ಏನೆಂದರೆ ಫಿಲಿಷ್ಟಿಯರು ಮತ್ತು ಕಸ್ಲೂಹ್ಯರು ಆರಂಭಿಕ ಕಾಲದ ವೇಳೆ ಒಂದು ನಿಕಟವಾದ ಸಂಬಂಧದಲ್ಲಿ ಭಾಗಿಯಾಗಿದ್ದರು ಎಂಬುದೆ. ನೂರಾರು ವರ್ಷಗಳ ಬಳಿಕ, ಐಗುಪ್ತದಿಂದ ಉಗಮಿಸಿದ್ದ ಕಸ್ಲೂಹ್ಯರಲ್ಲಿ ಅನೇಕರು (ಇನ್ನೂ "ಫಿಲಿಷ್ಟಿಯರು" ಎಂದು ಕರೆಯಲ್ಪಟ್ಟಿರಲಿಲ್ಲ) ಕ್ರೇತ್ ದ್ವೀಪಕ್ಕೆ ವಲಸೆ ಹೋಗಿರಬಹುದಾಗಿದೆ ಮತ್ತು ಅವರು ಅಲ್ಲಿ ಬಹಳಷ್ಟು ಕಾಲದ ತನಕ ಜೀವಿಸಿದ್ದರಿಂದ ಅದು ಅವರ ಸ್ವಸ್ಥಳವಾಗಿ ಮಾರ್ಪಟ್ಟಿರಬಹುದು. ತರುವಾಯ, ಪ್ರವಾದಿಗಳು ಕಫ್ತೂರ್ಯದ (ಕ್ರೇತ್) ಕುರಿತು ಕಾನಾನ್ ದೇಶವನ್ನು ಮುತ್ತಿಗೆ ಹಾಕುವದಕ್ಕೆ ಬಂದಂಥ ಫಿಲಿಷ್ಟಿಯರಿಗೆ ಅದು ನಿವಾಸವಾಗಿದೆ ಎಂಬುದಾಗಿ ಮಾತಾಡಿದ ವೇಳೆ, ಅವರು ಫಿಲಿಷ್ಟಿಯರ ನಿಜವಾದ ಮೂಲ ಸ್ಥಳದ (ಐಗುಪ್ತ) ಬದಲಾಗಿ ಎರಡನೆಯ ನೆಲೆಗೊಂಡ ಸ್ಥಳವನ್ನು ಸೂಚಿಸುತ್ತಿರಬಹುದಾಗಿದೆ.

ಇನ್ನೊಂದು ವಿಚಾರವು ಏನೆಂದರೆ ಆದಿಕಾಂಡ ಪುಸ್ತಕದಲ್ಲಿನ ಫಿಲಿಷ್ಟಿಯರು ಕ್ರಿ.ಪೂ. ಹದಿಮೂರನೆಯ ಶತಮಾನದ ಕಡೆಯ ಅರ್ಧಭಾಗದಲ್ಲಿ ಫಿಲಿಷ್ಟಿಯದ ಮೇಲೆ ದಾಳಿ ಮಾಡಿದ ಮತ್ತು ದಾವೀದನು ಅವರನ್ನು ಪರಾಜಯಗೊಳಿಸುವ ವರೆಗೂ ಇಸ್ರಾಯೇಲ್ಯರಿಗೆ ತೊಂದರೆ ಕೊಡುತ್ತಿದ್ದ (2 ಸಮುವೇಲ 8:11, 12) ಫಿಲಿಷ್ಟಿಯರಿಗಿಂತ ಬೇರೆಯಾದ ಮತ್ತೊಂದು ಜನಾಂಗೀಯ ಗುಂಪಾಗಿರಬಹುದಾಗಿದೆ.

**ವಚನ 15.** ಹಾಮನ ನಾಲ್ಕನೆಯ ಪುತ್ರನು **ಕಾನಾನ್**, ಮತ್ತು ಆತನಲ್ಲಿ **ಮೊದಲು ಹುಟ್ಟಿದವನು ಸೀದೋನ್**. "ಸಿದೋನ್" ಎಂಬುದು ಇದೇ ವಾಕ್ಯಭಾಗದಲ್ಲಿ, 10:19ರಲ್ಲಿ ಒಂದು ಸ್ಥಳದ ಹೆಸರಾಗಿ ಸಹ ಬಳಸಲ್ಪಟ್ಟಿದೆ. ಬೈಬಲಿನ ಇತಿಹಾಸದೊಳಗೆ ಆರಂಭದಲ್ಲಿ, "ಸಿದೋನ್" ಎಂಬ ಹೆಸರು ಫೊಯಿನಿಕಿಯರ ಅತ್ಯಂಥ ಪ್ರಾಮುಖ್ಯವಾದ ನಗರದೊಂದಿಗೆ ಜೋಡಿಸಲ್ಪಟ್ಟಿತ್ತು, ಮತ್ತು ಅದು ಯೆಹೋಶುವ 19:28ರಲ್ಲಿ "ಮಹಾನಗರ" ಎಂದು ಕರೆಯಲ್ಪಟ್ಟಿದೆ. ಈ ಚರಿತ್ರೆಯೊಳಗೆ ತೂರ್ ಇಲ್ಲದಿರುವುದು ಈ ವಂಶಾವಳಿಯ ಸಾಮಗ್ರಿಗೆ ಒಂದು ಎರಡನೆಯ ಸಹಸ್ರಮಾನದ ಆರಂಭದ ದಿನಾಂಕವನ್ನು ಸೂಚಿಸುತ್ತದೆ, ಯಾಕೆಂದರೆ ಈ ಕಡೆಯ ನಗರವು Hiram Iನ ಆಳ್ವಿಕೆಯಡಿಯಲ್ಲಿ ಕ್ರಿ.ಪೂ. 1000 ತನಕವೂ ಸಿದೋನ್ ನಗರವನ್ನು ಮೀರಿಸಿ ಬೆಳೆದಿರಲಿಲ್ಲ, ಈತನು ದಾವೀದನ ಸಮಕಾಲೀನನಾದ ಒಬ್ಬ ಅರಸನಾಗಿದ್ದನು.

ನಂತರ ಬರುವ ಹೆಸರು **ಹೇತ್**, ಇದು NIVಯಲ್ಲಿ "ಹಿತ್ತೀಯರು" ಎಂದು

ಅನುವಾದಿಸಲ್ಪಟ್ಟಿದ್ದರೆ, NEBಯು ಕಡೆಯ ಹೆಸರನ್ನು ಒಂದು ಪರ್ಯಾಯ ಅನುವಾದವಾಗಿ ನೀಡಿರುತ್ತದೆ. ಸ್ವರಾಕ್ಷರಗಳಿಲ್ಲದಿದ್ದಲ್ಲಿ, "ಹೀತ್ಯರು" ಮತ್ತು "ಹಿತ್ತೀಯರು" ಎಂಬವುಗಳು ಬೈಬಲಿನ ಹಸ್ತಪ್ರತಿಗಳಲ್ಲಿ ತದ್ರೂಪವಾಗಿರುತ್ತವೆ. ಈ ಜನರು ಆದಿಯಲ್ಲಿನ ಅಂಟೋಲಿಯನ್ನರೊಂದಿಗೆ ಯಾವದಾದರೂ ಸಂಬಂಧವನ್ನು ಹೊಂದಿರಬಹುದು, ಅಥವಾ ಅವರು ಹಿತ್ತೀಯರೊಳಗಿನ ಕಾನಾನ್ಯರ ಉಪಪಂಗಡವಾಗಿರಬಹುದಾಗಿದೆ (ನೋಡಿರಿ 23:10).[16]

**ವಚನ 16. ಯೆಬೂಸಿಯರು** ಎಂಬುದು ಯೆರೂಸಲೇಮಿನಲ್ಲಿ ಮತ್ತು ಅದರ ಸುತ್ತಮುತ್ತಲು ವಾಸಿಸುತ್ತಿದ್ದ ಒಂದು ಇಸ್ರಾಯೇಲ್-ಪೂರ್ವ ಹೆಸರಾಗಿದೆ (ಯೆಹೋಶುವ 15:8, 63; 18:28; 2 ಸಮುವೇಲ 5:6, 8). ಅವರಿಗೆ ಯೆಹೂದ್ಯೇತರ ಹೆಸರುಗಳಿದ್ದವು, ಆದರೆ ಅವರ ಜನಾಂಗೀಯ ಮೂಲವು ನಿರ್ಧರಿಸಲ್ಪಡದೆ ಇರುತ್ತದೆ. "ಯೆಬೂಸ" (יְבוּס, *ಯೆಬೂಸ)* ಎಂಬುದು - ಇದು "ಯೆರೂಸಲೇಮ್" ಎಂಬುದಕ್ಕೆ ಒಂದು ಸಂಕ್ಷಿಪ್ತ ಹೆಸರಾಗಿದ್ದು (ನ್ಯಾಯಸ್ಥಾಪಕ 19:10, 11) - ಬಹುಶಃ *ಯಾಬೂಸುಮ್* ಎಂಬ ಅಮೋರಿಯ ಹೆಸರಿಗೆ ಸಂಬಂಧ ಪಟ್ಟಿರಬಹುದಾಗಿದೆ ಇದು ಯೆರೂಸಲೇಮಿನ ಒಂದು ಪ್ರಾಚೀನ ವಂಶದ ಭಾಗವು ಅಮೋರಿಯರಿಂದ ಬಂದಿರುತ್ತದೆಂದು ಯೆಹೆಜ್ಕೇಲನು ಘೋಷಿಸುವದಕ್ಕೆ ಸರಿಹೊಂದುತ್ತದೆ (ಯೆಹೆಜ್ಕೇಲ 16:3).[17] ಬೈಬಲಿನಲ್ಲಿ ಬರೆದಿಡಲ್ಪಟ್ಟಿರುವ "ಅರೌನ" (2 ಸಮುವೇಲ 24:16-24) ಮತ್ತು "ಒರ್ನಾನ" (1 ಪೂರ್ವಕಾಲವೃತ್ತಾಂತ 21:15-28; 2 ಪೂರ್ವಕಾಲವೃತ್ತಾಂತ 3:1) ಎಂಬಂತಹ ಯೆಬೂಸಿಯ ಹೆಸರುಗಳು ಬಹುಶಃ ಹುರಿಯನ್ನರ ಪರಂಪರೆಯಿಂದ ಬಂದವುಗಳಾಗಿರಬಹುದು.[18] ಪ್ರಾಚೀನ ಹುರಿಯನ್ನರು ಅರ್ಮೆನಿಯನ್ನರ ಪ್ರಾಂತ್ಯದಿಂದ ಬಂದವರಾಗಿದ್ದರು ಮತ್ತು ಕ್ರಿ.ಪೂ. 2500ರಿಂದ 1000 ತನಕ ಪ್ರಾಚೀನ ಮಧ್ಯಪ್ರಾಚ್ಯದುದ್ದಕ್ಕೂ ಹರಡಿಕೊಂಡಿದ್ದರು. ಅವರು ಶಕ್ತಿಶಾಲಿ ಮಿಟನ್ನಿ ಸಾಮ್ರಾಜ್ಯವನ್ನು ಸ್ಥಾಪಿಸಿದ್ದರು, ಹಾರಾನ್‌ನ್ನು ತಮ್ಮ ಆರ್ಥಿಕ ಮತ್ತು ರಾಜಕೀಯ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು.[19]

**ಅಮೋರಿಯರು** ಪಟ್ಟಿಯಲ್ಲಿ ನಾಲ್ಕನೆಯ ಸ್ಥಾನದಲ್ಲಿದ್ದು, ಇದು ಹಳೆಯ ಅಕ್ಕಾಡಿಯನ್ನ ಮೂಲಗಳಲ್ಲಿ *ಅಮ್ಮುರ್ರೂ* ಎಂಬುದಾಗಿ ಕಂಡುಬರುತ್ತದೆ, ಇದರರ್ಥವು "ಪಶ್ಚಿಮ" ಎಂದಾಗಿರುತ್ತದೆ. ಅಮೋರಿಯರು ಮೆಸಪೋತಾಮ್ಯದ ಅಮೋರಿಯ ರಾಜವಂಶಗಳ ದೃಷ್ಟಿಕೋನದಿಂದ ನೋಡುವಾಗ ನಿಜವಾಗಿಯೂ ಪಾಶ್ಚಾತ್ಯರೇ ಆಗಿದ್ದರು, ಅವರ ಮೂಲ ಸ್ಥಳವು ಇದೇ ಆಗಿತ್ತು: ಬಾಬಿಲೋನ, ಮಾರಿ, ಮತ್ತು ಅಶ್ಶೂರ. ಸಿರಿಯ, ಫೊಯಿನಿಕ್ಯ, ಮತ್ತು ಕಾನಾನಿನಲ್ಲಿದ್ದ ಅಮೋರಿಯರು ಪ್ರಾಚೀನ ಕಾನಾನ್ಯರಿಗೆ ಸಂಬಂಧ ಪಟ್ಟಂಥ ಒಂದು ಪಶ್ಚಿಮ-ಯೆಹೂದಿ ಭಾಷೆಯನ್ನು ಮಾತಾಡುತ್ತಿದ್ದರು. ಬೈಬಲ್ "ಅಮೋರಿಯರು" ಎಂಬ ಪದವನ್ನು ಕನಿಷ್ಠ ಎರಡು ಬೇರೆ ಬೇರೆ ಅರ್ಥಗಳಲ್ಲಿ ಬಳಕೆ ಮಾಡುತ್ತದೆ: (1) ಇದು ಇಸ್ರಾಯೇಲ್-ಪೂರ್ವದಲ್ಲಿ ಕಾನಾನಿನೊಳಗೆ ವಾಸಿಸುತ್ತಿದ್ದ ನಿವಾಸಿಗಳನ್ನು ಸೂಚಿಸುತ್ತದೆ (ಯೆಹೋಶುವ 10:5), ಯೋರ್ದಾನ್ ನದಿಯ ಪೂರ್ವ ದಿಕ್ಕಿನ ಕಡೆಯಲ್ಲಿ ನೆಲೆಸಿದ್ದವರನ್ನು ಸಹ ಸೂಚಿಸುತ್ತದೆ (ಧರ್ಮೋಪದೇಶಕಾಂಡ 3:8), ಮತ್ತು (2) ಇದು ಮಧ್ಯಭಾಗದ ಪರ್ವತ ದೇಶದಲ್ಲಿ ನೆಲೆಸಿದ್ದ ಜನರನ್ನು ಗುರುತಿಸುತ್ತದೆ, ಇದು ಮೆಡಿಟೆರ್ರೇನಿಯನ್ ಸಮುದ್ರದ ಕರಾವಳಿಯುದ್ಧಕ್ಕೂ ಇರುವ ನಗರಗಳಲ್ಲಿ ವಾಸಿಸುತ್ತಿದ್ದ ಕಾನಾನ್ಯರಿಗೆ ತದ್ವಿರುದ್ಧವಾಗಿರುತ್ತದೆ (ಯೆಹೋಶುವ 11:3).[20]

ಇಸ್ರಾಯೇಲ್ಯರು ಪ್ರವೇಶ ಮಾಡಿದ ವೇಳೆ ಕಾನಾನ್ ದೇಶವನ್ನು ಆಕ್ರಮಿಸಿಕೊಂಡಿದ್ದ ಮತ್ತೊಂದು ಕಾನಾನ್ಯ ಜನರು **ಗಿರ್ಗಾಷಿಯರು** (15:21; ಧರ್ಮೋಪದೇಶಕಾಂಡ 7:1; ಯೆಹೋಶುವ 3:10; 24:11). ಈ ಜನರ ಕುರಿತು ಹೆಚ್ಚುಕಡಿಮೆ ನಮಗೆ ಏನೇನೂ

ಗೊತ್ತಿರುವದಿಲ್ಲ, ಆದರೆ ರಾಸ ಶಾಮ್ರಾದಲ್ಲಿ (ಉತ್ತರ ಸಿರಿಯ) ದೊರೆತ ಉಗಾರ್ಯರ ಬರಹಗಳಲ್ಲಿ ದಾಖಲಿಸಲ್ಪಟ್ಟಿರುವ ಎರಡು ವೈಯಕ್ತಿಕ ಹೆಸರುಗಳು "ಗಿರ್ಗಾಷಿಯರು" ಎಂಬುದನ್ನು ಹೋಲುವ ಕಾಗುಣಿತಗಳನ್ನು ಹೊಂದಿರುತ್ತವೆ ಮತ್ತು ಅದರಿಂದ ಬಂದಿರಬಹುದಾಗಿದೆ. ಅಲ್ಲದೆ, ಗದರೇನರ, ಗೆರಸೇನರ, ಅಥವಾ ಗೆರ್ಗೆಸೇನರ ಪ್ರಾಂತ್ಯವನ್ನು (ಮತ್ತಾಯ 8:28; ಮಾರ್ಕ 5:1; ಲೂಕ 8:26, 37)[21] – ಇಲ್ಲಿ ಯೇಸುವು ದೆವ್ವ ಪೀಡಿತ ವ್ಯಕ್ತಿಯೊಬ್ಬನನ್ನು ಗುಣಪಡಿಸಿದ್ದನು – ಗಿರ್ಗಾಷಿಯರು ವಾಸಿಸುತ್ತಿದ್ದ ಸ್ಥಳವೆಂಬುದಾಗಿ ಕೆಲವರು ಗುರುತಿಸುತ್ತಾರೆ. ಹೇಗೂ, ಇಸ್ರಾಯೇಲ್ಯರು ಗಿರ್ಗಾಷಿಯರನ್ನು ಯೋರ್ದಾನ್ ನದಿಯ ಪಶ್ಚಿಮದ ದಿಕ್ಕಿನಲ್ಲಿ ಎದುರ್ಗೊಂಡಿದ್ದರು, ಆದರೆ ಯೇಸುವು ತನ್ನ ಅದ್ಭುತಗಳನ್ನು ಯೋರ್ದಾನ್ ನದಿಯ ಪೂರ್ವ ದಿಕ್ಕಿನ ಸ್ಥಳದಲ್ಲಿ ನಡಿಸಿದ್ದನು.

**ವಚನ 17. ಹಿವ್ವಿಯರು** ಹಲವಾರು ವಾಕ್ಯಭಾಗಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುತ್ತಾರೆ, ಆದರೆ ಅವರ ಕುರಿತಾಗಿ ನಮಗೆ ಪ್ರಬಲವಾದ ಮಾಹಿತಿಯು ಸ್ವಲ್ಪವೂ ಇರುವದಿಲ್ಲ. "ಹಿವ್ವಿಯರು" ಎಂಬುದು "ಹೊರ್ರೈತರು"[22] ಎಂಬುದಕ್ಕೆ ಪರ್ಯಾಯ ಹೆಸರು ಎಂಬುದಾಗಿ ಕೆಲವರು ಯೋಚಿಸುತ್ತಾರೆ. ಹಿವ್ವಿಯರು ಲೆಬನೋನ ಮತ್ತು ಸಿರಿಯದಲ್ಲಿ ಒಟ್ಟಗೂಡಿ ಇದ್ದಿರಬಹುದು (ಯೆಹೋಶುವ 11:3; ನ್ಯಾಯಸ್ಥಾಪಕ 3:3), ಆದರೆ ಅವರಲ್ಲಿ ಕೆಲವರನ್ನು ಕಾನಾನಿನ ದಕ್ಷಿಣದಲ್ಲಿನ ಶೆಕೆಮ್ ಮತ್ತು ಗಿಬ್ಯೋನ್‌ಗಳಲ್ಲಿರುವದಾಗಿ ಪ್ರಸ್ತಾಪಿಸಲ್ಪಟ್ಟಿರುತ್ತಾರೆ (33:18; 34:2; ಯೆಹೋಶುವ 9:3, 7). **ಅರ್ಕಿಯರು** ಲೆಬನೊನಿನ ತ್ರಿಪೋಲಿಯಿಂದ ಸುಮಾರು ಹನ್ನೆರಡು ಮೈಲಿಗಳಷ್ಟು ದೂರದಲ್ಲಿ ನೆಲೆಸಿದ್ದ ಜನರಾಗಿದ್ದರು, ಅದು ಫೊಯಿನಿಕ್ಯದ ಗಡಿಯಲ್ಲಿನ ಕರಾವಳಿಯ ಸಮೀಪದಲ್ಲಿತ್ತು. ಇಂದು ಈ ಸ್ಥಳವು ಟೆಲ್ ಅರ್ಕ್ವಾ ಎಂದು ಕರೆಯಲ್ಪಡುತ್ತದೆ; ಇದರ ಉತ್ಖನನದ ಭಗ್ನಾವಶೇಷಗಳು ಆರಂಭಿಕ ತಾಮ್ರದ ಯುಗದಷ್ಟು ಹಳೆಯದಾಗಿರುತ್ತವೆ. **ಸೀನಿಯರ** ಗೋತ್ರವು ಮತ್ತೊಂದು ಉತ್ತರ ಕಾನಾನ್ಯದ ಜನಾಂಗವಾಗಿದ್ದರು, ಅವರಲ್ಲಿ ಕೆಲವರು ಉತ್ತರ ಫೊಯಿನಿಕ್ಯದ ಸಿಯಾನು ಪಟ್ಟಣದೊಂದಿಗೆ ಸಂಬಂಧ ಹೊಂದಿರುತ್ತಾರೆ.

**ವಚನ 18. ಅರ್ವಾದಿಯ** ಜನರು ಪ್ರಾಚೀನ ಮಧ್ಯಪ್ರಾಚ್ಯದ ಬರಹಗಳಲ್ಲಿ ಉತ್ತಮವಾಗಿ ಪ್ರತಿನಿಧಿಸಲ್ಪಟ್ಟಿರುತ್ತಾರೆ. ಅವರ ಆಧುನಿಕ ನಗರವು ರೌದ, ತ್ರಿಪೋಲಿಯಿಂದ ಉತ್ತರಕ್ಕೆ ಸುಮಾರು ಮೂವತ್ತೈದು ಮೈಲಿಗಳಷ್ಟು ದೂರದಲ್ಲಿ, ಮೆಡಿಟೆರ್ರೇನಿಯನ್ ಕರಾವಳಿಯಿಂದ ಎರಡು ಮೈಲಿಗಳಷ್ಟು ದೂರದಲ್ಲಿರುವ ಒಂದು ದ್ವೀಪದಲ್ಲಿರುತ್ತದೆ. ಯೆಹೆಜ್ಕೇಲ 27:8, 11ನೇ ವಚನಗಳು ಅರ್ವಾದಿಯರನ್ನು ತೂರ್ ದೇಶದ ಹಡಗುಗಳಲ್ಲಿ ಪ್ರಯಾಣಿಕರು ಎಂಬುದಾಗಿ, ಮಾತ್ರವಲ್ಲದೆ ತೂರಿನ ಸೈನ್ಯದಲ್ಲಿ ಸೇವೆ ಸಲ್ಲಿಸಿದ ಸೈನಿಕರೆಂಬುದಾಗಿ ಪ್ರಸ್ತಾಪಿಸುತ್ತವೆ. ಇದಾದ ಮೇಲೆ ಕಾಣಿಸಿಕೊಳ್ಳುವ ಹೆಸರು **ಚೆಮಾರಿಯರೂ** (יְ־ִמָּצ, *ತ್ಸೆಮಾರಿ)*, ಇದು ಪ್ರಾಚೀನ ಐಗುಪ್ತದ ಮತ್ತು ಅಶ್ಶೂರ್ಯದ ಬರಹಗಳಲ್ಲಿ ದೊರಕುತ್ತದೆ ಮತ್ತು ತ್ರಿಪೋಲಿ ಮತ್ತು ಅರ್ವಾದ ನಡುವಿನ ಸಿರಿಯಾದ ಮೆಡಿಟೆರ್ರೇನಿಯನ್ ಕರಾವಳಿಯಲ್ಲಿರುವ ಈಗಿನ ಸುಮ್ರಾ ಗ್ರಾಮದೊಂದಿಗೆ ಜೋಡನೆ ಮಾಡಲ್ಪಟ್ಟಿರುತ್ತದೆ. **ಹಮಾತಿಯರು** ಒರೆಂಟೊಸ ನದಿಯ ದಡಗಳಲ್ಲಿನ ಉತ್ತರ ಸಿರಿಯದಲ್ಲಿ ಹಮಾತ್ (ಈಗ ಹಮಾ ಎಂದು ಕರೆಯಲ್ಪಡುತ್ತದೆ) ನಗರದಲ್ಲಿ ನೆಲೆಗೊಂಡಿದ್ದರು, ಇದು ಹಳೆಯ ಒಡಂಬಡಿಕೆಯ ಕಾಲಗಳಲ್ಲಿ ಕಾನಾನ್ ಮತ್ತು ಇಸ್ರಾಯೇಲ್‌ಗಳ ಉತ್ತರ ದಿಕ್ಕಿನ ಗಡಿಗಳಲ್ಲಿತ್ತು (ಅರಣ್ಯಕಾಂಡ 34:8; 1 ಅರಸು 8:65; 2 ಅರಸು 14:25; ಆಮೋಸ 6:2, 14).

10:15-18ರಲ್ಲಿ ಪಟ್ಟಿಮಾಡಲಾಗಿರುವ **ಕುಲಗಳ** ಮೂಲಕವೇ **ಕಾನಾನ್** [ಜನರು]

**ಹರಡಿಕೊಂಡರು**. ಇಲ್ಲಿ ಬಳಸಲಾಗಿರುವ "ಹರಡಿಕೊಂಡರು" (פּוּץ, *ಪುಟ್ಸ್*) ಎಂಬ ಕ್ರಿಯಾಪದವು 11:4, 8ರಲ್ಲಿ "ಚದುರಿಸಲ್ಪಟ್ಟರು" ಎಂದು ಅನುವಾದಿಸಲ್ಪಟ್ಟಿದೆ. 10:10ರಲ್ಲಿ "ಬಾಬೆಲ್" ಎಂಬುದರ ಪ್ರಸ್ತಾಪಿಸುವಿಕೆಯ ಪ್ರಕಾರವೇ, "ಹರಡಿಕೊಂಡರು" ಎಂಬುದು 11ನೇ ಅಧ್ಯಾಯದಲ್ಲಿನ ಬಾಬೆಲ್ ಗೋಪುರದ ಕಥೆಯನ್ನು ಎದುರುನೋಡುತ್ತದೆ, ಆಗ ದೇವರು "ಅವರನ್ನು ಅಲ್ಲಿಂದ ಭೂಲೋಕದಲ್ಲೆಲ್ಲಾ ಚದರಿಸಿದನು" (11:8).

**ವಚನ 19.** ಒಂದು ಸಾರಾಂಶದ ಹೇಳಿಕೆಯಲ್ಲಿ, ಲೇಖಕನು ಉತ್ತರಕ್ಕೆ **ಸೀದೋನ್** ಪಟ್ಟಣದಿಂದ ಆರಂಭಗೊಂಡು ದಕ್ಷಿಣದ ಕಡೆಗೆ **ಗೆರಾರಿಗೆ ಹೋಗುವ ದಾರಿಯ** ವರೆಗೆ **ಕಾನಾನ್ಯರ** ಸೀಮೆಯು ಇತ್ತು ಮತ್ತು ಅದು ಗಾಜಾ ಪಟ್ಟಣದ ವರೆಗೂ ಎಂಬುದಾಗಿ ದಕ್ಷಿಣದ ಮೇರೆಯು ಗುರುತಿಸಲ್ಪಟ್ಟಿರುತ್ತದೆ. ಗಾಜಾ ಮೆಡಿಟೆರ್ರೇನಿಯನ್ ಕರಾವಳಿಯುದ್ದಕ್ಕೂ ಕಾನಾನ್ ಮೂಲಕ ಸಾಗುವ ಮುಖ್ಯ ರಸ್ತೆಯ ಮೇಲೆ ಇತ್ತು, ಅದು ಐಗುಪ್ತನ್ನು ಫಲವತ್ತಾದ ಚಂದ್ರಾಕೃತಿಯೊಂದಿಗೆ ಮತ್ತು ಮೆಸಪೋತಾಮ್ಯದ ಮಹಾ ನಾಗರೀಕತೆಗಳೊಂದಿಗೆ ಜೋಡಿಸುವದಾಗಿತ್ತು. ಆಗ್ನೇಯದ ಗಡಿರೇಖೆಯು ಕೆಂಪು ಸಮುದ್ರದ ದಕ್ಷಿಣ ಪ್ರಾಂತ್ಯದಿಂದ **ಸೊದೋಮ್, ಗೊಮೋರ, ಅದ್ಮಾ, ಚೆಬೋಯಿಮ್ ಎಂಬ ಪಟ್ಟಣಗಳಿಗೆ ಹೋಗುವ ದಾರಿಯಲ್ಲಿರುವ ಲೆಷಾ ಊರಿನವರೆಗೂ ಇತ್ತು**. 14:2, 3ರ ಪ್ರಕಾರವಾಗಿ, ಮೊದಲ ನಾಲ್ಕು ಪಟ್ಟಣಗಳು "ಸಿದ್ದೀಮ್ ತಗ್ಗಿನೊಳಗೆ" (ಅಂದರೆ, ಲವಣಸಮುದ್ರ) ಇದ್ದವು. ಈ ಪಟ್ಟಣಗಳ ದುಷ್ಟತನದ ಕಾರಣದಿಂದಾಗಿ ಇವುಗಳು ಯೆಹೋವನಿಂದ ನಾಶಗೊಳಿಸಲ್ಪಟ್ಟವು (19:24, 25, 28, 29; ನೋಡಿರಿ ಧರ್ಮೋಪದೇಶಕಾಂಡ 29:22-26; ಯೆಶಾಯ 1:9, 10; 3:9; ಹೋಶೇಯ 11:8; ಆಮೋಸ 4:11). ಈ ಯಾವದೇ ಪಟ್ಟಣಗಳ ಸ್ಥಳವನ್ನು ನಿಜವೆಂದು ಸಾಭಿತುಪಡಿಸುವ ಯಾವ ಉತ್ಖನನಶಾಸ್ತ್ರದ ಪುರಾವೆಯೂ ಇರುವದಿಲ್ಲ. "ಲೆಷಾ" ಎಂಬುದು ಪ್ರಸ್ತಾಪಿಸಲ್ಪಟ್ಟಿರುವ ಕೊನೆಯ ನಗರವಾಗಿದೆ, ಮತ್ತು ಬೈಬಲಿನಲ್ಲಿ ಇದು ಪ್ರಸ್ತಾಪಿಸಲ್ಪಟ್ಟಿರುವ ನಿದರ್ಶನವು ಇದೊಂದೇ ಆಗಿರುತ್ತದೆ.

**ವಚನ 20.** ಈ ವಿಭಾಗಕ್ಕೆ ಮುಕ್ತಾಯದ ಮಾತುಗಳನ್ನು ಬರೆಯುತ್ತಾ, ಲೇಖಕನು ಮತ್ತೊಂದಾವರ್ತಿ **ಕುಲಭಾಷಾ ದೇಶಜನಾಂಗಗಳ ಪ್ರಕಾರ ಇವರೇ ಹಾಮನ ವಂಶದವರು** ಎಂಬುದನ್ನು ಒತ್ತಿ ಹೇಳುತ್ತಾನೆ. ಜನಾಂಗಗಳ ಕೋಷ್ಟಕದಲ್ಲಿ ವಂಶಸ್ತರ ಈ ಎರಡನೆಯ ಪಟ್ಟಿಯನ್ನು ಮುಕ್ತಾಯವು (ನೋಡಿರಿ 10:5, 31) ಯೆಫೆತನ ಕುಟುಂಬದ ಕುರಿತಾದ ಪಟ್ಟಿಗಿಂತ (10:5) ಸ್ವಲ್ಪ ವ್ಯತ್ಯಾಸವಾಗಿರುತ್ತದೆ. ಯೆಫೆತ್ಯರ "ದೇಶಭಾಷಾ ಕುಲಜನಾಂಗಗಳ" ಪ್ರಕಾರ ಎಂಬುದು ಹಾಮನ ವಂಶದವರ ವಿಷಯದಲ್ಲಿ ಹಿಮ್ಮೋಗವಾಗಿ ಪ್ರಸ್ತಾಪಿಸಲ್ಪಟ್ಟಿರುತ್ತವೆ.

## ಶೇಮನ ಪುತ್ರರು (10:21-31)

**[21]ಇಬ್ರಿಯರೆಲ್ಲರಿಗೆ ಮೂಲಪುರುಷನೂ ಯೆಫೆತನ ಅಣ್ಣನೂ ಆಗಿದ್ದ ಶೇಮನಿಗೆ ಸಹ**
**ಸಂತಾನವಾಯಿತು. [22]ಶೇಮನ ಸಂತಾನದವರು - ಏಲಾಮ್, ಅಶ್ಶೂರ್, ಅರ್ಪಕ್ಷದ್, ಲೂದ್,**
**ಅರಾಮ್ ಎಂಬವರೇ. [23]ಅರಾಮ್ ಸಂತಾನದವರು - ಊಸ್, ಹೂಲ್, ಗೆತೆರ್, ಮಷ್**
**ಎಂಬವರೇ. [24]ಅರ್ಪಕ್ಷದನಿಂದ ಶೆಲಹನೂ ಶೆಲಹನಿಂದ ಎಬರನೂ ಹುಟ್ಟಿದರು. [25]ಎಬರನಿಗೆ**
**ಇಬ್ಬರು ಮಕ್ಕಳು ಹುಟ್ಟಿದರು. ಒಬ್ಬನಿಗೆ ಪೆಲೆಗೆಂಬ ಹೆಸರು; ಅವನ ಕಾಲದಲ್ಲಿ ಭೂಮಿಯ**
**ಜನಗಳು ವಿಂಗಡವಾದವು. ಅವನ ತಮ್ಮನ ಹೆಸರು ಯೊಕ್ತಾನ್. [26]ಯೊಕ್ತಾನನ ಸಂತಾನದವರು**
**- ಅಲ್ಮೋದಾದ್ ಶೆಲೆಫ್ ಹಚರ್ಮಾವೆತ್ ಯೆರಹ [27, 28]ಹದೋರಾಮ್ ಊಜಾಲ್ ದಿಕ್ಲಾ ಓಬಾಲ್**
**ಅಬೀಮಯೇಲ್ ಶೆಬಾ [29]ಓಫೀರ್‌ಹವೀಲ ಯೋಬಾಬ್ ಎಂಬ ಸ್ಥಳಗಳವರು. ಈ ಕುಲಗಳೆಲ್ಲಾ**

**ಯೊಕ್ತಾನನಿಂದ ಹುಟ್ಟಿದವು. [30]ಇವರ ನಿವಾಸವು ಮೇಶಾಸೀಮೆ ಮೊದಲುಗೊಂಡು ಮೂಡಲಲ್ಲಿರುವ ಸೆಫಾರ್ ಎಂಬ ಬೆಟ್ಟದವರೆಗೂ ಇತ್ತು. [31]ಕುಲಭಾಷಾ ಜನಾಂಗಗಳ ಪ್ರಕಾರ ಇವರೇ ಶೇಮನ ವಂಶದವರು.**

**ವಚನ 21.** ನೋಹನ ಸಂತತಿಯವರ ಪಠನೆಯಲ್ಲಿ **ಶೇಮ**ನ ವಂಶಾವಳಿಯು ಕಡೆಯದಾಗಿ ತಿಳಿಸಲ್ಪಟ್ಟಿದೆ ಯಾಕೆಂದರೆ ಆತನ ಕುಟುಂಬವು ದೈವಶಾಸ್ತ್ರೀಕವಾಗಿ ಬೇರೆಯವರಿಗಿಂತ ಹೆಚ್ಚು ಪ್ರಾಮುಖ್ಯವಾಗಿರುತ್ತದೆ. ಇದರ ಸತ್ಯವು ಸ್ಪಷ್ಟವಾಗಿ ಗೋಚರಿಸುತ್ತದೆ ಯಾಕೆಂದರೆ ವಾಕ್ಯವು ತಕ್ಷಣವೇ ಶೇಮನು **ಇಬ್ರಿಯರೆಲ್ಲರಿಗೆ ಮೂಲಪುರುಷನು** ಎಂದು ಪ್ರಸ್ತಾಪಿಸುತ್ತದೆ, ಇವರು ಎಬರನ ಮಕ್ಕಳಾಗಿದ್ದು ಆತನು ಅಬ್ರಹಾಮ ಹಾಗೂ ಆರಿಸಿಕೊಳ್ಳಲ್ಪಟ್ಟ ಇಬ್ರಿಯ ಜನಾಂಗಕ್ಕೆ ನಡಿಸುವಂಥ ವಂಶದ ಪೂರ್ವಜನಾಗಿದ್ದನು. ಇಲ್ಲಿ "ಪಿತೃ" ಎಂಬುದನ್ನು ಸಾಮಾನ್ಯವಾಗಿ "ಮೂಲಪುರುಷ" ಎಂದು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ ಎಂಬುದಕ್ಕೆ ಇನ್ನೊಂದು ಉದಾಹರಣೆಯು ಇರುತ್ತದೆ, ಯಾಕೆಂದರೆ ಎಬರನು ವಾಸ್ತವಿಕದಲ್ಲಿ ಶೇಮನ ಮರಿಮೊಮ್ಮಗನಾಗಿದ್ದನು (10:22-24).

NASB ಪ್ರಕಾರವಾಗಿ. ಶೇಮನು **ಯೆಫೆತನ ಅಣ್ಣ**ನಾಗಿದ್ದನು. ಬಹಳಷ್ಟು ಆಂಗ್ಲ ಆವೃತ್ತಿಗಳಲ್ಲಿ ಈ ಮಾತುಗಳೇ ಇರುತ್ತವೆ.[23] ಈ ಮಾತುಗಳಿಗೆ ಬೆಂಬಲವಾಗಿ ಇರುವ ವಾಸ್ತವಾಂಶವು ಏನೆಂದರೆ, ನೋಹನ ಮೂವರು ಪುತ್ರರನ್ನು ಪ್ರಸ್ತಾಪಿಸುವ ಎಲ್ಲಾ ವಾಕ್ಯಭಾಗಗಳಲ್ಲಿಯೂ ಶೇಮನು ಮೊದಲನೆಯದಾಗಿ ಪಟ್ಟಿಯಲ್ಲಿರುತ್ತಾನೆ (5:32; 6:10; 7:13; 9:18; 10:1). ಹೇಗೂ, ಶೇಮನು ಹಿರಿಯವನಾಗಿದ್ದನು ಎಂಬುದನ್ನು ಈ ಕ್ರಮ ಸಂಖ್ಯೆಯು ಸಾಭೀತುಪಡಿಸುವದಿಲ್ಲ. ಅಂತೂ, ಹಾಮನು ನೋಹನ "ಕಿರೀಮಗ" (9:24) ಆಗಿದ್ದಾಗ್ಯೂ ಆತನು ಪಟ್ಟಿಯಲ್ಲಿ ಎರಡನೆಯ ಸ್ಥಾನದಲ್ಲಿ ಕಾಣಿಸಿಕೊಳ್ಳುತ್ತಾನಷ್ಟೆ. NASBಯಲ್ಲಿನ ಮಾತುಗಳು ಸರಿಯಾಗಿರುವದಾದಲ್ಲಿ, ಶೇಮನ ಆದ್ಯತೆಯನ್ನು ಕುರಿತು ಒತ್ತಿ ಹೇಳುವದಕ್ಕಾಗಿ ಆತನು "ಯೆಫೆತನ ಹಿರಿಯ ಸಹೋದರನು" ಎಂಬುದಾಗಿ ಲೇಖಕನು ಹೇಳಿರುವ ಸಾಧ್ಯತೆಯಿದೆ - ಆದಾಗ್ಯೂ ಯೆಫೆತನ ವಂಶವು ಅಧ್ಯಾಯ 10ರಲ್ಲಿ ಮೊದಲನೆಯದಾಗಿ ಕಾಣಿಸಿಕೊಳ್ಳುತ್ತದೆ.

ಹೇಗೂ, ಕೆಲವು ಆವೃತ್ತಿಗಳು ಸೂಚಿಸುವದೇನೆಂದರೆ, ಯೆಫೆತನು ಶೇಮನ ಅಣ್ಣನಾಗಿದ್ದನು ಎಂಬುದೆ (KJV; NKJV; NIV). ಉದಾಹರಣೆಗೆ, KJVಯು ಶೇಮನು "ಹಿರಿಯ ಸಹೋದರನಾದ ಯೆಫೆತನ ಸಹೋದರನಾಗಿದ್ದನು" ಎಂದು ಹೇಳುತ್ತದೆ. ಈ ಅಕ್ಷರಶಃ ಅನುವಾದವು ಇಬ್ರಿಯ ವಾಕ್ಯದಲ್ಲಿನ[24] ಅಕ್ಷರ ಕ್ರಮವನ್ನು ಹಾಗೆಯೇ ಉಳಿಸಿಕೊಂಡಿರುತ್ತದೆ ಮತ್ತು LXXನೊಂದಿಗೆ ಒಮ್ಮತ ಹೊಂದಿರುತ್ತದೆ. U. Cassutoನ ಪ್ರಕಾರವಾಗಿ, ಈ ಬಣ್ಣನೆಯು "ಸಹೋದರರನ್ನು ಅವರ ಚೊಚ್ಚಲು ಸಹೋದರನಿಗೆ ಸಂಬಂಧ ಪಟ್ಟಂತೆ ಬಿರುದನ್ನು ಕೊಡುವದನ್ನು ಅಗತ್ಯವೆನ್ನುವ, ಪ್ರಾಚೀನ ಹಿರಿಯತ್ವ ಅಥವಾ ಯಜಮಾನತ್ವದ ವ್ಯವಸ್ಥೆಗೆ"[25] ಸರಿಯಾಗಿ ನಡೆದುಕೊಳ್ಳುತ್ತದೆ. ಯೆಫೆತನು ನೋಹನ ಪುತ್ರರಲ್ಲಿ ಹಿರಿಯವನಾಗಿದ್ದಲ್ಲಿ, ಪ್ರಳಯದ ಸಂದರ್ಭದಲ್ಲಿ ಶೇಮನ ವಯಸ್ಸನ್ನು ವಿವರಿಸುವದರಲ್ಲಿ ಯಾವ ಸಮಸ್ಯೆಯೂ ಉದ್ಭವವಾಗುವದಿಲ್ಲ (11:10, 11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 22.** ಆತನ ಸಂತತಿಯವರ ಮೊದಲ ಶ್ರೇಣಿಯಲ್ಲಿ ತಿಳಿಸಲ್ಪಟ್ಟಿರುವ **ಶೇಮನ ಸಂತಾನದವರ** ಹೆಸರುಗಳೊಳಗೆ, ಪಟ್ಟಿಯ ಆರಂಭದಲ್ಲಿ **ಏಲಾಮ್** ಇರುತ್ತಾನೆ. ಏಲಾಮ್ಯರು ಆಧುನಿಕ ಇರಾನಿನ ನೈಋತ್ಯ ಭಾಗದ ಟೈಗ್ರೀಸ್-ಯೂಫ್ರೇಟಿಸ್ ಕಣಿವೆಯಲ್ಲಿ

ವಾಸಿಸುತ್ತಿದ್ದರು. ಸುಸಾ ಅವರ ಪ್ರಾಚೀನ ರಾಜಧಾನಿಯಾಗಿತ್ತು (ಎಸ್ತೇರಳು 1:2-5; ದಾನಿಯೇಲ 8:2). ಇಲ್ಲಿ ಗೊಂದಲವುಂಟಾಗುತ್ತದೆ ಯಾಕೆಂದರೆ ಏಲಾಮ್ಯರ ಭಾಷೆಯು ಯೆಹೂದಿಕ ಆಗಿರಲಿಲ್ಲ. ಅವರನ್ನು ಶೇಮನ ಸಂತತಿಯರೆಂದು ಹೇಳುವದಕ್ಕೆ ರಕ್ತಸಂಬಂಧಕ್ಕಿಂತಲೂ ಸಾಂಸ್ಕೃತಿಕ ಹಾಗೂ ಭೌಗೋಳಿಕ ಪರಿಗಣನೆಗಳು ಹೆಚ್ಚು ಪ್ರಾಮುಖ್ಯವಾಗಿರುತ್ತವೆಂದು ಕೆಲವರು ಯೋಚಿಸುತ್ತಾರೆ. ಹೇಗೂ, ಏಲಾಮಿನಲ್ಲಿದ್ದ ಅತ್ಯಂಥ ಆರಂಭದಲ್ಲಿ ನೆಲೆಸಿದ್ದವರು ಆ ಪ್ರಾಂತ್ಯದಲ್ಲಿ ಎಂದಿಗೂ ಪ್ರಬಲವಾಗದಂಥ, ಆದರೆ ಆ ಪ್ರಾಂತ್ಯದಲ್ಲಿ ಪ್ರಬಲರಾಗಿದ್ದ ಬೇರೆ ಜನರಿಗೆ ದಾರಿ ಮಾಡಿಕೊಡುವಂತೆ ತಮ್ಮ ಸಂಸ್ಕೃತಿಗೆ ಅವಕಾಶ ಕೊಟ್ಟಂಥ ಯೆಹೂದಿಕ ಜನರಾಗಿದ್ದಿರಬಹುದು.[26]

**ಅಶ್ಶೂರ್** ಎಂಬುದಾಗಿ ಅನುವಾದಿಸಿರುವ ಪದವನ್ನು "ಅಶ್ಶೂರ್ಯ" ಎಂಬುದಾಗಿ ಸಹ ಅನುವಾದಿಸಬಹುದು, ಮತ್ತು ಇದು ಉತ್ತರ ಮೆಸಪೋತಾಮ್ಯದ ಕಣಿವೆಯ ಜನರು ಮತ್ತು ದೇಶ ಎರಡಕ್ಕೂ ಹೆಸರನ್ನು ಒದಗಿಸುತ್ತದೆ, ಮಾತ್ರವಲ್ಲದೆ ಅದರ ಪ್ರಾಚೀನ ದೇವರಿಗೂ ಒದಗಿಸುತ್ತದೆ. ಆದಿಕಾಂಡ 10:11, 12 ಹೇಳುವದೇನೆಂದರೆ, ನಿಮ್ರೋದನು ಹಾಮನ ವಂಶದಿಂದ ಬಂದವನಾಗಿದ್ದು ಅಶ್ಶೂರ್ಯದಲ್ಲಿ ಪ್ರಾಮುಖ್ಯವಾದ ನಗರಗಳನ್ನು ಕಟ್ಟಿದನು ಎಂಬುದೆ. 10:22ರಲ್ಲಿ, ಅಶ್ಶೂರ್ಯದ (ಅಶ್ಶೂರ) ವಾಸ್ತವಿಕವಾದ ಹೆಸರು ಹಿಂದಕ್ಕೆ ಹೋಗಿ ಶೇಮನ ಸಂತಾನದವರೊಂದಿಗೆ ಗುರುತಿಸಲ್ಪಡುತ್ತದೆ. ಸುಮೆರಿಯನ್ ಸಂಸ್ಕೃತಿಗೆ ಸೇರಿದವರಾದ ಹಾಮನಿಂದಾದ ಜನರು ಅಶ್ಶೂರದಲ್ಲಿ ನೆಲೆಸಿದ ಆರಂಭಿಕ ನಿವಾಸಿಗಳಾಗಿದ್ದಿರಬಹುದು. ಹಾಗಿರುವದೇ ಆಗಿದ್ದಲ್ಲಿ, ಯೆಹೂದಿ ಹಿನ್ನಲೆಯ ಜನರ ಸಂಸ್ಕೃತಿಯು ಅನಂತರದಲ್ಲಿ ಮೆಸಪೋತಾಮ್ಯದುದ್ದಕ್ಕು ಹರಡಿಕೊಂಡಂತೆ ಇವರು ಹಾಮನಿಂದ ಬಂದವರ ಸ್ಥಾನವನ್ನು ಆಕ್ರಮಿಸಿಕೊಂಡಿರಬಹುದಾಗಿದೆ.[27]

**ಅರ್ಪಕ್ಷದ್** ಎಂಬುದು ಒಂದು ಮರ್ಮವಾಗಿಯೇ ಉಳಿದಿರುತ್ತದೆ, ಯಾವದೇ ಗುರುತಿಗೂ ವ್ಯುತ್ಪತ್ತಿಶಾಸ್ತ್ರಕ್ಕೂ ದೊರಕದ್ದಾಗಿದೆ. ಇಬ್ರಿಯದಲ್ಲಿರುವ ಕೊನೆಯ ಮೂರು ಪದಗಳಾದ, כשד *(ಕ್ಷದ)* ಎಂಬುವುಗಳು ಕಸ್ದಿಮ್‌ರಿಗೆ (ಕಸ್ದೀಯರು ಅಥವಾ ಬಾಬಿಲೋನಿಯರು) ಸಂಬಂಧ ಪಡಬಹುದಾಗಿದೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಇನ್ನೊಂದು ಸಾಧ್ಯತೆಯು ಏನೆಂದರೆ ಅರ್ಪಕ್ಷದ್‌ನ್ನು ಅರ್ರಪ್ಪಾದೊಂದಿಗೆ (ಆಧುನಿಕ ಕಿರ್ಕುಕ್) ಗುರುತಿಸುವಿಕೆಯೇ ಆಗಿದೆ, ಇದು ಇರಾಕಿನಿಂದ ಉತ್ತರಕ್ಕೆ ಇರುವ ಒಂದು ನಗರವಾಗಿದೆ. ಹೇಗೂ, ಎರಡೂ ಊಹೆಗಳಲ್ಲಿಯೂ ಪ್ರಾಚೀನ ಅರ್ಪಕ್ಷದ್ ವಿಷಯದಲ್ಲಿ ಒಂದು ಸಹಮತಕ್ಕೆ ಬರಲು ಪರಿಣಿತರಿಗೆ ತಡೆಯನ್ನೊಡ್ಡುವಂಥ ಕಠಿಣತೆಗಳಿರುತ್ತವೆ.

ಗುರುತಿಸಲ್ಪಡಲು ಸಾಧ್ಯವಿಲ್ಲದ ಇನ್ನೊಂದು ಹೆಸರೆಂದರೆ **ಲೂದ್**. ಲೂದ್ಯರು ಹಾಮನ ವಂಶದಿಂದ ಬಂದವರಾಗಿದ್ದರಾದರೂ (10:13, 14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಈ ಲೂದ್‌ನು ಶೇಮನ ವಂಶದಿಂದ ಬಂದವನಾಗಿದ್ದನು; ಆದದರಿಂದ, ಅವರು ಒಂದೇ ಜನರಾಗಿರುವದಿಲ್ಲ. ಕೆಲವರು ಇಲ್ಲೊಂದು ಸಮಸ್ಯೆಯಿರುವದಾಗಿ ಗ್ರಹಿಸಿಕೊಳ್ಳುತ್ತಾರೆ; ಆದರೆ ಪ್ರಾಚೀನ ಕಾಲದಲ್ಲಿ, ಮಾತ್ರವಲ್ಲದೆ ಇಂದಿನ ಕಾಲದಲ್ಲಿ ಸಹ ಇಬ್ಬರು ಸಹೋದರರ ವಂಶಾವಳಿಗಳಲ್ಲಿ ಒಂದೇ ವಿಧವಾದ ಹೆಸರನ್ನು ಎದುರ್ಗೊಳ್ಳುವುದು ಸಾಮಾನ್ಯವಾಗಿದ್ದು ಅದರಲ್ಲಿ ತಪ್ಪೇನೂ ಇರುವದಿಲ್ಲ, ಆದ್ದರಿಂದ ವಾಕ್ಯಕ್ಕೆ ಸಂಬಂಧ ಪಟ್ಟಂತೆ ಅದನ್ನು ಸಮಸ್ಯೆಯೆಂದು ನೋಡಬಾರದು. ಲೂದ್ಯರು ಯಾರೆಂಬುದು ನಮಗೆ ಹೇಗೆ ಗೊತ್ತಿಲ್ಲವೋ, ಹಾಗೆಯೇ ಲೂದ್ ಬಗ್ಗೆಯಾಗಲಿ ಅಥವಾ ಆತನು ಮತ್ತು ಅವನ ಜನರು ಇದ್ದ ಸ್ಥಳದ ಬಗ್ಗೆಯಾಗಲಿ ಹೆಚ್ಚುಕಡಿಮೆ ನಮಗೆ ಏನೂ ಗೊತ್ತಿರುವದಿಲ್ಲ.

ಪಟ್ಟಿಯಲ್ಲಿರುವ ಶೇಮನ ಕೊನೆಯ ಮಗನು **ಆರಾಮ್**. ಈತನು ಏಲಾಮಿನ ಹತ್ತಿರದಲ್ಲಿರುವ ಕಿರ್ ಊರಿಗೆ ಸೇರಿದ ಪೂರ್ವಾರ್ತ್ಯ ಪೂರ್ವಜನಾಗಿರಬಹುದು (ಯೆಶಾಯ 22:6; ಆಮೋಸ 9:7). ಆರಾಮ್ಯರ ಜನರು ಕ್ರಿ.ಪೂ. ಎರಡನೆಯ ಸಹಸ್ರಮಾನದ ವೇಳೆ ಉತ್ತರ ಮೆಸಪೊಟಾಮ್ಯ ಹಾಗೂ ಸಿರಿಯದಲ್ಲಿ ವಿವಿಧ ಸ್ಥಳಗಳಲ್ಲಿ ನೆಲೆಗೊಂಡರು, ಮತ್ತು ಪೂರ್ವಜರ ಕಥಾನಿರೂಪಣೆಗಳು ಅಬ್ರಹಾಮ, ಇಸಾಕ, ಮತ್ತು ಯಾಕೋಬರು, ಅರಾಮ್ಯರ ಸಂಸ್ಕೃತಿಯ ಕೇಂದ್ರವಾಗಿದ್ದ ಹಾರಾನಿನ ಸಂಗಡ ಹೊಂದಿದ್ದ ನಿಕಟ ಸಂಬಂಧವನ್ನು ಪ್ರತಿಫಲಿಸುತ್ತದೆ (11:31, 32; 24:4, 10; 25:20; 27:43; 28:5, 10; 31:17–24). ಧರ್ಮೋಪದೇಶಕಾಂಡ 26:5ನೇ ವಚನವು ಯಾಕೋಬನನ್ನು ಒಬ್ಬ "ಆರಾಮ್ಯನಾದ ... ಗತಿಯಿಲ್ಲದವನು" ಎಂಬುದಾಗಿ ಗುರುತಿಸುತ್ತದೆ ಯಾಕೆಂದರೆ ಆತನು ಹಾರಾನಿನಲ್ಲಿ ಇಪ್ಪತ್ತು ವರ್ಷಗಳ ಕಾಲ ವಾಸಿಸಿದ್ದನು. ಅಬ್ರಹಾಮನ ಸಹೋದರನಾದ ನಾಹೋರನ ವಂಶಾವಳಿಯು "ಆರಾಮ" ಎಂಬ ಹೆಸರಿನ ಬೇರೊಬ್ಬ ವ್ಯಕ್ತಿಯನ್ನು ಒಳಗೊಂಡಿರುತ್ತದೆ (22:21).

**ವಚನ 23.** ಶೇಮನ ಐದು ಮಂದಿ ಪುತ್ರರು 10:22ರಲ್ಲಿ ಪಟ್ಟ ಮಾಡಲ್ಪಟ್ಟಿದ್ದಾರೆ, ಆದರೆ **ಆರಾಮ**ನ ಮತ್ತು ಅರ್ಪಕ್ಷದ್‌ನ ಸಂತತಿಯವರು ಮಾತ್ರವೇ ನಂತರದಲ್ಲಿ ಬರುವ ಚರಿತ್ರೆಯಲ್ಲಿ ಸೇರ್ಪಡೆಗೊಳಿಸಲ್ಪಟ್ಟಿದ್ದಾರೆ. ಆರಾಮನ ಮೊದಲ ಮಗನ ಹೆಸರು **ಊಸ್**, ಆದರೆ ಈತನ ಬಗ್ಗೆಯಾಗಲಿ ಮತ್ತು ಆತನ ಸಂತಾನದವರ ಬಗ್ಗೆಯಾಗಲಿ ಏನೂ ತಿಳಿದು ಬಂದಿರುವದಿಲ್ಲ. "ಊಸ್" ಎಂಬುದು ಹಳೆಯ ಒಡಂಬಡಿಕೆಯಲ್ಲಿ ಒಂದು ಸ್ಥಳದ ಹೆಸರಾಗಿ ಅನೇಕ ಸಾರಿ ಬಳಸಲ್ಪಟ್ಟಿರುತ್ತದೆ. ಒಂದು ಸಂದರ್ಭದಲ್ಲಿ, ಅದು ಯೋಬನ ಸ್ವಂತ ಊರು ಆಗಿರುತ್ತಿತ್ತು (ಯೋಬ 1:1), ಆದರೆ ನಿಖರವಾದ ಸ್ಥಳವು ಯಾವದೆಂಬುದು ಖಚಿತವಾಗಿರುವದಿಲ್ಲ. ಕೆಲವರು ಈ ಊಸ್ ಇಸ್ರಾಯೇಲಿನಿಂದ ಈಶಾನ್ಯದಲ್ಲಿರುವ ಆರಾಮಿನಲ್ಲಿರುತ್ತದೆಂದು ಹೇಳಿದರೆ, ಇನ್ನು ಕೆಲವರು ಇದು ಇಸ್ರಾಯೇಲಿನಿಂದ ಆಗ್ನೇಯಕ್ಕೆ ಅಥವಾ ಏದೋಮಿನ ಹತ್ತಿರದಲ್ಲಿದೆ ಎಂದು ಹೇಳುತ್ತಾರೆ (ನೋಡಿರಿ ಯೋಬ 2:11). ಇನ್ನುಳಿದ ವಾಕ್ಯಗಳು ಒಂದು ದಕ್ಷಿಣದಕ್ಕಿರುವ ಊಸ್ ಕುರಿತು ಉಲ್ಲೇಖಿಸುತ್ತವೆ (ಯೆರೆಮೀಯ 25:20, 21; ಪ್ರಲಾಪ 4:21). ಈ ಸ್ಥಳವು ಏಸಾವನ ಸಂತತಿಯವರೊಳಗೆ ಒಬ್ಬನೊಂದಿಗೆ ಸಂಬಂಧ ಹೊಂದಿರಬಹುದಾಗಿದೆ (36:1, 28). Josephusನ ಪ್ರಕಾರವಾಗಿ, 10:23ರಲ್ಲಿರುವ "ಊಸ್" ಎಂಬ ವ್ಯಕ್ತಿಯು ದಮಸ್ಕ ನಗರವನ್ನು, ಇಸ್ರಾಯೇಲಿನಿಂದ ಉತ್ತರ ದಿಕ್ಕಿನಲ್ಲಿ ಸ್ಥಾಪಿಸಿದನು.[28] ಇದು ಅನಿಶ್ಚಿತತೆಯಿಂದ ಕೂಡಿದೆಯಾದರೂ, ಅರಾಮ್ಯದ ನಾಗರೀಕತೆಯು ಪ್ರಾಥಮಿಕವಾಗಿ ಉತ್ತರದ ಮೆಸಪೊಟಾಮ್ಯ (ಹಾರಾನಿನಲ್ಲಿ ಹಾಗೂ ಅದರ ಸುತ್ತಮುತ್ತಲು) ಹಾಗೂ ಸಿರಿಯಗಳಲ್ಲಿ ಇತ್ತೆಂಬ ವಾಸ್ತವಾಂಶದೊಂದಿಗೆ ಸಹಮತವನ್ನು ಹೊಂದಿರುತ್ತದೆ. ನಾಹೋರನ ವಂಶಾವಳಿಯೊಳಗೆ ಮತ್ತೊಬ್ಬ "ಊಸ್" ಪ್ರಸ್ತಾಪಿಸಲ್ಪಟ್ಟಿರುತ್ತಾನೆ (22:21).

**ಹುಲ್** ಮತ್ತು **ಗೆತೆರ್** ಎಂಬುವರು ಸಹ ಗುರುತಿಸಲ್ಪಡದವರಾಗಿ ಉಳಿಯುತ್ತಾರೆ, ಅದೇ ರೀತಿಯೇ **ಮಷ್** ಸಹ. NIVಯು LXX ಮತ್ತು 1 ಪೂರ್ವಕಾಲವೃತ್ತಾಂತ 1:17ನ್ನು ಅನುಸರಿಸುತ್ತಾ ಇಬ್ರಿಯ ಭಾಷೆಯ מַשׁ (*ಮಷ್*) ಎಂಬುದನ್ನು "ಮೆಷೆಕ್" (מֶשֶׁךְ, *ಮೆಷೆಕ್*) ಎಂಬಂತೆ ಅನುವಾದಿಸುತ್ತದೆ. ಸ್ವರಾಕ್ಷರಗಳಿಲ್ಲದೆ, ಎರಡು ಹೆಸರುಗಳ ನಡುವೆ ಒಂದು ವ್ಯಂಜನದ (ך, *ಕ*) ವ್ಯತ್ಯಾಸವಿರುತ್ತದೆ. ಹಸ್ತಪ್ರತಿ ನಕಲುಗಾರನು ಆಕಸ್ಮಿಕವಾಗಿ 10:23ರಿಂದ ಈ ಅಕ್ಷರವನ್ನು ಕೈ ಬಿಟ್ಟಿರಬಬಹುದಾಗಿದೆ ಅಥವಾ ಬಹುಶಃ ಆತನು ಅದನ್ನು 1 ಪೂರ್ವಕಾಲವೃತ್ತಾಂತ 1:17ರಲ್ಲಿ ಸೇರ್ಪಡೆಗೊಳಿಸಿರಬಹುದು. ಈ ಎರಡನೆಯ ಪ್ರಕರಣದಲ್ಲಿ, ಆತನು 1 ಪೂರ್ವಕಾಲವೃತ್ತಾಂತ 1:5ರಿಂದ ಪ್ರಭಾವಿತನಾಗಿರಬಹುದು, ಅದು ಯೆಫೆತನ

ವಂಶದೊಳಗೆ ಒಬ್ಬ "ಮೆಷೆಕ್"ನನ್ನು ಪ್ರಸ್ತಾಪಿಸುತ್ತದೆ. ಸಂದರ್ಭಾನುಸಾರವಾಗಿ, ಕೆಲವು ಇಬ್ರಿಯ ಹಸ್ತಪ್ರತಿಗಳು 1 ಪೂರ್ವಕಾಲವೃತ್ತಾಂತ 1:17ರೊಳಗೆ "ಮಷ್" ಎಂದು ಹೊಂದಿರುತ್ತವೆ. "ಮಷ್" ಇದ್ದಂಥ ಸ್ಥಳದ ಕುರಿತಾದ ಅಭಿಪ್ರಾಯಗಳೊಳಗೆ ಕೇಂದ್ರಿಯ ಅಸ್ಯ ಸೀಮೆ, ಉತ್ತರ ಮೆಸಪೋತಾಮ್ಯದಲ್ಲಿನ ಮಾಸಿಯಸ್ ಪರ್ವತ, ಮತ್ತು ಲೆಬನೊನಿನ ಪರ್ವತಗಳು ಸೇರಿರುತ್ತವೆ.

**ವಚನ 24.** ವಂಶಾವಳಿಯು ಮುಂದುವರೆದ ಹಾಗೆ, **ಅರ್ಪಕ್ಷದನಿಂದ ಶೆಲಹನು** ಹುಟ್ಟಿದನೆಂದು ಹೇಳಲಾಗಿರುತ್ತದೆ; ಮತ್ತು ಆತನು ಪ್ರತಿಯಾಗಿ, **ಶೆಲಹನಿಂದ ಎಬರನು ಹುಟ್ಟಿದನು**. "ಶೆಲಹ"ನ ವಿಷಯದಲ್ಲಿ ನೋಡುವದಾದರೆ, ಆತನು ಹೆಸರು ಯೆಹೂದನ ವಂಶದಲ್ಲಿ ಪುನಃ ಕಾಣಿಸಿಕೊಳ್ಳುತ್ತದೆಂದಷ್ಟೇ ಬಲ್ಲೆವು (38:5, 11, 14, 26; 46:12; ಅರಣ್ಯಕಾಂಡ 26:20; 1 ಪೂರ್ವಕಾಲವೃತ್ತಾಂತ 2:3; 4:21-23). "ಎಬರ"ನು ಇಬ್ರಿಯ ಜನರ ಪೂರ್ವಜನಾಗಿದ್ದನು. ಸಮರ್ಪಕ ಹೆಸರಾದ "ಎಬರುಮ್" ಎಂಬುದು ಕ್ರಿ.ಪೂ. 2300ರ ಕಾಲಕ್ಕೆ ಸೇರಿದ ಎಬ್ಲಾ ಕಲ್ಲಿನ ಹಲಿಗೆಗಳಲ್ಲಿ ಕಂಡು ಹಿಡಿಯಲ್ಪಟ್ಟಿತ್ತು. ಈ ಎಬರುಮ್ ಉತ್ತರ ಸಿರಿಯದಲ್ಲಿದ್ದ ಪ್ರಾಚೀನ ಎಬ್ಲಾದ ಅರಸನಾಗಿದ್ದನು. ಈ ಮಹತ್ವಪೂರ್ಣವಾದ ಉತ್ಖನನಶಾಸ್ತ್ರದ ಅನ್ವೇಷಣೆಯು "ಎಬರ" ಎಂಬುದು ಕ್ರಿ.ಪೂ. ಮೂರನೆಯ ಸಹಸ್ರಮಾನದ ಕಡೆಯ ಭಾಗದಲ್ಲಿ ಒಂದು ನ್ಯಾಯಯುತವಾದ ಯೆಹೂದಿ ಹೆಸರಾಗಿತ್ತು ಎಂಬುದನ್ನು ದೃಢಪಡಿಸುತ್ತದೆ, 10:24ರಲ್ಲಿನ ಎಬರನನ್ನು ಪ್ರಾಚೀನ ಎಬ್ಲಾದ ಎಬರುಮ್‌ನಿಗೆ ಸಮಗೊಳಿಸುವದಕ್ಕೆ ಸಾಧ್ಯವಿಲ್ಲ. ಅವರು ಬೇರೆ ಬೇರೆ ವ್ಯಕ್ತಿಗಳಾಗಿದ್ದರೆಂಬುದು ಸ್ಪಷ್ಟವಾಗುತ್ತದೆ.[29]

**ವಚನ 25. ಎಬರನಿಗೆ ಇಬ್ಬರು ಮಕ್ಕಳು** ಯಾರೆಂದರೆ **ಪೆಲೆಗ** ಮತ್ತು **ಯೊಕ್ತಾನ**. ಹಿರಿಯ ಮಗನಾದ "ಪೆಲೆಗ"ನ ವಿಷಯವಾಗಿ ನೋಡುವದಾದರೆ, ಈತನ **ಕಾಲದಲ್ಲಿ ಭೂಮಿಯ ಜನಗಳು ವಿಂಗಡವಾದವು** ಎಂದು ನಮಗೆ ತಿಳಿಸಲ್ಪಟ್ಟಿದೆ. ಲೇಖಕನು ಈ ವ್ಯಕ್ತಿಯ ಹೆಸರು ಮತ್ತು ಆತನ ಜೀವಿತಕಾಲದ ವೇಳೆ ಭೂಮಿಯ ಜನಗಳು ವಿಂಗಡವಾಗುವುದರ ನಡುವೆ ಶಬ್ದಾಡಂಬರವನ್ನು ಬಳಸುತ್ತಿರುವುದು ಸ್ಪಷ್ಟವಾಗಿರುತ್ತದೆ. "ಪೆಲೆಗ" (גֶלֶפ, *ಪೆಲೆಗ)* ಎಂಬ ಹೆಸರು גַלָפ *(ಪಲಾಗಾ)* ಎಂಬ ಮೂಲ ಕ್ರಿಯಾಪದದಿಂದ ಬಂದಿರುತ್ತದೆ, ಈ ಪದದ ಅರ್ಥವು "ವಿಂಗಡಿಸಿ" ಎಂದಾಗಿರುತ್ತದೆ; ಮತ್ತು ಇಲ್ಲಿ, ಇಉ ಪೆಲೆಗನ ಜೀವಿತಾವಧಿಯಲ್ಲಿ ತಾತ್ಕಾಲಿಕವಾಗಿ ಸಂಭವಿಸುವ ಘಟನೆಗಳಿಗೆ ಛಾಯೆಯಾಗಿದೆ: ಬಾಬೆಲ್ ಗೋಪುರದ ಘಟನೆಯ ನಿಮಿತ್ತವಾಗಿ ಮಾನವರು ಭೂಮಿಯ ಮೇಲೆಲ್ಲಾ ಚದುರಿಸಲ್ಪಡುವುದು (11:1-9).

**ವಚನ 26.** 10:26-30ರಲ್ಲಿನ ಶೇಮನ ಸಂತತಿಯವರೊಳಗೆ ಹದಿಮೂರು ಹೆಸರುಗಳಿರುತ್ತವೆ, ಅದು ನೋಹನ ಈ ಮಗನ ಅಡಿಯಲ್ಲಿ ಪಟ್ಟಿಮಾಡಲಾಗಿರುವ ವ್ಯಕ್ತಿಗಳ ಒಟ್ಟಾರೆ ಸಂಖ್ಯೆಯಲ್ಲಿ ಅರ್ಧದಷ್ಟಿರುತ್ತದೆ (10:21-31). ಈ ಜನರು ಅರಬ್ಬಿಯದ ಪರ್ಯಾಯ ದ್ವೀಪದಲ್ಲಿ ನೆಲೆಗೊಂಡಿದ್ದರು.

**ಯೊಕ್ತಾನ**ನ ವಿಷಯದಲ್ಲಾದರೋ, ಯಾವದೇ ಗುರುತನ್ನು ಖಚಿತಪಡಿಸುವದಕ್ಕೆ ಆಗುವದಿಲ್ಲ; ಆದರೆ ಆತನ ಪುತ್ರರ ಹೆಸರುಗಳು ದಕ್ಷಿಣ ಅರಬ್ಬಿಯದಲ್ಲಿ ಪರಿಚಿತವಿರುವ ಗೋತ್ರಗಳ ಹಾಗೂ ಸ್ಥಳಗಳ ಹೆಸರುಗಳಿಗೆ ವ್ಯುತ್ಪತ್ತಿಶಾಸ್ತ್ರಗಳನ್ನು ಒದಗಿಸುತ್ತದೆ.[30] **ಅಲ್ಮೋದಾದ್** ಎಂಬುದು LXXನಲ್ಲಿ "ಎಲ್ಮೋದಾದ್" ಎಂದಿರುತ್ತದೆ, ಅದರರ್ಥವು "ದೇವರು *[ಎಲ್]* ಒಬ್ಬ ಮಿತ್ರನು"; ಆದರೆ ಈ ವ್ಯಕ್ತಿಯು ಹಳೆಯ ಒಡಂಬಡಿಕೆಯ ಹೊರಗಿನ ಯಾವದೇ ಬರಹಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ. **ಶೆಲೆಪ್** ಎಂಬ ಹೆಸರು ಯೆಮೆನ್ ಬಳಿಯಲ್ಲಿರುವ

ಒಂದು ಅರಬ್ಬಿಯನ್ ಗೋತ್ರ ಅಥವಾ ಸ್ಥಳಕ್ಕೆ ಸಂಬಂಧ ಹೊಂದಿರುತ್ತದೆ. **ಹಚರ್ಮಾವೆತ್** ಎಂಬುವನು ಯೆಮೆನ್‌ನ ಪೂರ್ವ ದಿಕ್ಕಿಗಿರುವ ಹದರ್ಮಾವುತ್ ಜಿಲ್ಲೆಯಲ್ಲಿನ ದಕ್ಷಿಣ ಅರಬ್ಬಿಯದಲ್ಲಿ ನೆಲೆಗೊಂಡಿರುವ ಜನರ ಪೂರ್ವಜನಾಗಿದ್ದನು. **ಯೆರಹ** ಎಂಬುದು יֶרַח *(ಯೆರಾಕ್)* ಎಂಬುದರಿಂದ ಬಂದಿರುತ್ತದೆ, "ತಿಂಗಳು" ಎಂಬುದು ಅದರರ್ಥವಾಗಿದೆ, ಮತ್ತು ಅದು "ಚಂದ್ರ" ಎಂಬುದಕ್ಕಿರುವ ಇಬ್ರಿಯ ಪದದಿಂದ (יָרֵחַ, *ಯೆರೆಆಕ್)* [31] ಎಂಬ ಪದಕ್ಕೆ ಸಂಬಂಧ ಪಟ್ಟಿದೆ. ದಕ್ಷಿಣ ಅರಬ್ಬಿಯದ ಜನರ ಪ್ರಮುಖ ದೇವರಿಗೆ ಇದೇ ಹೆಸರನ್ನು ಕೊಡಲಾಗಿತ್ತು.

**ವಚನಗಳು 27, 28. ಹದೋರಾಮ್** ಎಂಬುದರ ಅಕ್ಷರಶಃ ಅರ್ಥವು "ಹದಾ[ದ್]ನು ಘನತೆಗೇರಿದ್ದಾನೆ"[32] ಎಂದಾಗಿರುತ್ತದೆ. ಈ ಶೇಮನ ವಂಶದವನ ಜೊತೆಯಲ್ಲಿ, ಉತ್ತರ ಮೆಸಪೊಟಾಮ್ಯ ಮತ್ತು ಸಿರಿಯದಲ್ಲಿನ ಒಬ್ಬ ಬಿರುಗಾಳಿಯ ದೇವರು ಈ ಹೆಸರಿನಿಂದ ಪರಿಚಿತವಾಗಿದ್ದನು. "ಹದೋರಾಮ್" ಎಂಬುದು 1 ಪೂರ್ವಕಾಲವೃತ್ತಾಂತ 18:10 ಮತ್ತು 2 ಪೂರ್ವಕಾಲವೃತ್ತಾಂತ 10:18ರಲ್ಲಿನ ಪ್ರಮುಖ ವ್ಯಕ್ತಿಗಳ ಹೆಸರುಗಳೊಳಗೆ ಕಂಡು ಬರುತ್ತದೆ ಮತ್ತು ಒಂದು ಪ್ರಾಚೀನ ಸಬಾಯಿನ್ ಶಿಲಾಶಾಸನವು ಇದಕ್ಕೆ ಒಂದು ವೈಯಕ್ತಿಕ ಅಥವಾ ಗೋತ್ರದ ಹೆಸರು ಎಂಬುದಾಗಿ ಪ್ರಮಾಣೀಕರಿಸುತ್ತದೆ, ಆದಾಗ್ಯೂ ಈ ವಂಶಾವಳಿಯಲ್ಲಿ ಇದರ ನಿಖರವಾದ ಗುರುತು ಬಗೆಹರಿಸಲ್ಪಟ್ಟಿರುವದಿಲ್ಲ.

**ಊಜಾಲ್ನ** ಹೆಸರು ಪುನಃ ಯೆಹೆಜ್ಕೇಲ 27:19ರಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ ಮತ್ತು ಯೆಮೆನ್ ದೇಶದ ರಾಜಧಾನಿಯಾಗಿರುವ ಈಗಿನ ಸಾನಾ ನಗರಕ್ಕಿದ್ದ ಹಳೆಯ ಹೆಸರು (ಸ್ವಲ್ಪ ವಿವಾದವೂ ಇರುತ್ತದೆ) ಗುರುತಿಸಲ್ಪಟ್ಟಿದೆ. **ದಿಕ್ಲಾ** ಎಂಬುದು ಇಬ್ರಿಯ ಪದವಾದ (דֶּקֶל, *ದೆಕೆಲ್)* ಎಂಬುದರೊಂದಿಗೆ ಸಂಬಂಧ ಪಟ್ಟಿದ್ದು, "ಖರ್ಜೂರದ ಮರ" ಎಂದಾಗಿದೆ. ಈ ಕಾರಣಕ್ಕಾಗಿ, ಇದು ಖರ್ಜೂರದ ಗಿಡಗಳು ಬೆಳೆಯುತ್ತಿದ್ದಂಥ ಅರಬ್ಬಿಯದಲ್ಲಿನ ಒಂದು ಮರಳುಗಾಡಿನಲ್ಲಿ ಸಿಕ್ಕುವ ಅಪರೂಪದ ನೀರಿನ ಸ್ಥಳವಾಗಿರಬಬಹುದೆಂದು ಯೋಚಿಸಲಾಗುತ್ತದೆ.

**ಓಬಾಲ್** (עוֹבָל, *'ಓಬಾಲ್)* ಎಂಬುದು 1 ಪೂರ್ವಕಾಲವೃತ್ತಾಂತ 1:22ರಲ್ಲಿ "ಎಬಾಲ್" (עֵיבָל, *'ಐಬಾಲ್)* ಎಂಬುದಾಗಿ ಕಾಣಿಸಿಕೊಳ್ಳುತ್ತದೆ. ಉಚ್ಚರಣೆಯಲ್ಲಿನ ವ್ಯತ್ಯಾಸವು ಹಸ್ತಪ್ರತಿ ನಕಲುಗಾರನಿಗೆ ವ್ಯಂಜನಾಕ್ಷರ ವಾಕ್ಯದಲ್ಲಿನ *ವಾವ್* (ו) ಮತ್ತು *ಯೊದ* (י) ಅಕ್ಷರಗಳ ನಡುವೆ ಗೊಂದಲವನ್ನು ಮಾಡಿಕೊಂಡದ್ದರ ಫಲಿತವಾಗಿ ಆಗಿರಬಹುದಾಗಿದೆ. ಆಸಕ್ತಿಕರವಾಗಿ, ಸಮಾರ್ಯದ ಪಂಚಪುಸ್ತಕವು 10:28ರಲ್ಲಿ ಮೂಲತಃ "ಎಬಾಲ್" ಎಂಬುದು ಇತ್ತೆಂಬುದಕ್ಕೆ ಬೆಂಬಲವನ್ನು ನೀಡುತ್ತದೆ. ಸ್ಥಳವು ಯಾವುದೆಂಬುದು ತಿಳಿದು ಬಂದಿರುವದಿಲ್ಲ, ಆದಾಗ್ಯೂ ಅದನ್ನು ಆಧುನಿಕ ಉಬಾಲ್ ಅಥವಾ ಯೆಮೆನಿನಲ್ಲಿರುವ ಬೇರೆ ಸ್ಥಳದೊಂದಿಗೆ ಗುರುತಿಸುತ್ತಾರೆ.

**ಅಬೀಮಯೇಲ್** ಎಂಬ ಹೆಸರಿನ ಅರ್ಥವು "ನನ್ನ ತಂದೆಯು ದೇವರು" ಎಂದಾಗಿದ್ದು, ಇದು ಸಬಾಯಿಯನ್ನರ ಅಥವಾ ಪಶ್ಚಿಮ-ಯೆಹೂದಿ ಪದಗಳ ರಚನೆಯಾಗಿರುತ್ತದೆಂದು ಕೆಲವರು ಭಾವಿಸುತ್ತಾರೆ. ಹೆಸರು ಇಲ್ಲಿ ಮತ್ತು 1 ಪೂರ್ವಕಾಲವೃತ್ತಾಂತ 1:22ರಲ್ಲಿ ಮಾತ್ರವೇ ಸಿಕ್ಕುತ್ತದಾದ್ದರಿಂದ, ಒಂದು ನಿಖರವಾದ ಸ್ಥಳವನ್ನು ಖಚಿತ ಪಡಿಸುವದಕ್ಕೆ ಸಾಧ್ಯವಿಲ್ಲ.

ಮುಂದಿನ ಸಂತಾನವು **ಶೆಬಾ**, ಈತನ ಹೆಸರು ಹಾಮನಿಂದಾದ ವಂಶದೊಳಗಿರುವ ವ್ಯಕ್ತಿಯೊಬ್ಬನ ಹೆಸರು ಇದೇ ಆಗಿತ್ತು (10:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಇಬ್ಬರು ವ್ಯಕ್ತಿಗಳ ಬಗ್ಗೆ ಗೊಂದಲ ಪಡಿಸಿಕೊಳ್ಳಬಾರದು; ಅವರಿಬ್ಬರೂ ಒಬ್ಬನೇ ವ್ಯಕ್ತಿಯಲ್ಲ. ಹಾಗಿದ್ದರೂ, ಅವರ ಸಂತತಿಯವರು ಸಮೀಪದ ಸ್ಥಳಗಳಲ್ಲಿ ವಾಸಿಸುತ್ತಿರಬಹುದಾದ

ಸಾಧ್ಯತೆಯಿದೆ.

**ವಚನ 29. ಓಫೀರ್** ಎಂಬುದು ಸೊಲೊಮೋನನು ಆ ಹೆಸರನ್ನು ಹೊಂದಿದ್ದ ಸ್ಥಳದಿಂದ ಹಡುಗುಗಳ ಮೂಲಕ ಆಮದು ಮಾಡಿಕೊಳ್ಳುತ್ತಿದ್ದ (1 ಅರಸು 9:28; 2 ಪೂರ್ವಕಾಲವೃತ್ತಾಂತ 8:18) ಅಪ್ಪಟ ಬಂಗಾರದೊಂದಿಗೆ ಸಂಬಂಧ ಹೊಂದಿದೆ (ಯೋಬ 22:24; 28:16; ಕೀರ್ತನೆ 45:9). ಇದು ಭಾರತ ಮತ್ತು ಆಫ್ರಿಕಾಗಳೆರಡರಲ್ಲಿಯೂ ಇತ್ತೆಂದು ಹೇಳಲಾಗುತ್ತದೆ, ಈ ಹೆಸರು ಶೇಮನ ವಂಶದಿಂದ ಬಂದದರಿಂದ ಬಹುಶಃ ಇದು ಅರಬ್ಬಿಯ ಪರ್ಯಾಯ ದ್ವೀಪದಲ್ಲಿದ್ದಂಥ ಒಂದು ಸ್ಥಳವನ್ನು ಹೆಚ್ಚು ಸಾಧ್ಯತೆಯನ್ನಾಗಿರುತ್ತದೆ.

**ಹವೀಲ** ನಂತರದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಹೆಸರು; ಇದು ಹಾಮನಿಂದಾದ ವಂಶದಲ್ಲಿ ಕಂಡು ಸಹ ಬರುವ ಇನ್ನೊಂದು ಹೆಸರು ಆಗಿರುತ್ತದೆ (10:7). 10:29ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಹವೀಲನು ಪಶ್ಚಿಮ ಅರಬ್ಬಿಯದಲ್ಲಿ ನೆಲೆಗೊಂಡಿರಬಹುದಾಗಿದೆ. ಇದು ಹವೀಲವನ್ನು "ಐಗುಪ್ತದೇಶದ ಮೂಡಲಲ್ಲಿ" ಇರುವದಾಗಿ ಹೇಳುವ ವಾಕ್ಯದೊಂದಿಗೆ ಸಹಮತ ಹೊಂದಿರುತ್ತದೆ, ಇದು ಇಸ್ಮಾಯೇಲ್ಯರ ನಿವಾಸ ಸ್ಥಾನವೆಂಬುದಾಗಿ ಹೇಳಲಾಗಿರುತ್ತದೆ (25:18). ಪಶ್ಚಿಮ ಅರಬ್ಬಿಯದಲ್ಲಿ ಇರುವಂಥ ಇದೇ ಕ್ಷೇತ್ರವು, ಪೀಶೋನ್ ನದಿಯ ಮೂಲವಾಗಿರಬಹುದಾಗಿದೆ (2:11, 12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ಯೋಬಾಬ್** ಎಂಬುವನು ಯೊಕ್ತಾನನ ಕೊನೆಯ ಮಗನಾಗಿದ್ದನು. ಇದೇ ಹೆಸರು ಅನಂತರ ಆದಿಕಾಂಡದೊಳಗೆ ಏದೋಮ್ಯರ ಅರಸರ ವಂಶದಲ್ಲಿ ಕಾಣಿಸಿಕೊಳ್ಳುತ್ತದೆ (36:33, 34) ಮತ್ತು ಹಳೆಯ ಒಡಂಬಡಿಕೆಯಲ್ಲಿ ಬೇರೊಂದು ಕಡೆಯಲ್ಲಿ ಕಂಡು ಬರುತ್ತದೆ (ಯೆಹೋಶುವ 11:1; 1 ಪೂರ್ವಕಾಲವೃತ್ತಾಂತ 8:9, 18). ಕೆಲವರು ಪ್ರಯೋಗಾತ್ಮಕವಾಗಿ ಯೋಬಾಬ್‌ನ್ನು ಜಹೈಬಾದದೊಂದಿಗೆ ಸಂಬಂಧಗೊಳಿಸುತ್ತಾರೆ, ಇದು ಮೆಕ್ಕಾದ ಕ್ಷೇತ್ರದಲ್ಲಿರುವ ಒಂದು ಅರಬ್ಬಿಯನ್ ಪಟ್ಟಣವಾಗಿತ್ತು.

**ವಚನ 30. ಇವರ ನಿವಾಸವು** ಎಂಬುದು ಸ್ಪಷ್ಟವಾಗಿರುವಂತೆ 10:26-29ರಲ್ಲಿ ಪಟ್ಟಿ ಮಾಡಲಾಗಿರುವ ಯೋಕ್ತಾನನ ಎಲ್ಲಾ ಮಕ್ಕಳನ್ನು ಸೂಚಿಸುತ್ತದೆ. ಲೇಖಕನು ಮುಂದೆ 10:19ರಲ್ಲಿರುವದನ್ನು ಹೋಲುವಂಥ ಹೇಳಿಕೆಯೊಂದನ್ನು ಸೇರಿಸುತ್ತಾನೆ, ಈ ಜನರು ವಾಸಿಸುತ್ತಿದ್ದ ಈ ಸೀಮೆಯ ಎಲ್ಲೆಯನ್ನು ನಿರ್ಧರಿಸುತ್ತದೆ. **ಮೇಶಾಸೀಮೆ, ಮೂಡಲಲ್ಲಿರುವ ಸೆಫಾರ್ ಎಂಬ ಬೆಟ್ಟದವರೆಗ**ಳನ್ನು ಇನ್ನು ಸಕಾರಾತ್ಮಕವಾಗಿ ಗುರುತಿಸಬೇಕಾಗಿದೆಯಾದರೂ, ಯೊಕ್ತಾನನ ಕುಟುಂಬವು ದಕ್ಷಿಣ ಅರಬ್ಬಿಯದ ಯಾವದೋ ಒಂದು ಭಾಗದಲ್ಲಿ ವಾಸಿಸುತ್ತಿದ್ದರೆಂಬುದನ್ನು ಕುರಿತು ಸಾಮಾನ್ಯವಾಗಿ ಒಮ್ಮತವಿರುತ್ತದೆ.

**ವಚನ 31.** ಈ ವಚನವು ಶೇಮನ ಸಂತತಿಯವರ ಕುರಿತಾದ ವಿಭಾಗವನ್ನು ಮುಕ್ತಾಯಗೊಳಿಸುತ್ತದೆ; ಅದು ಹೀಗೆ ಹೇಳುತ್ತದೆ, **ಕುಲಭಾಷಾ ಜನಾಂಗಗಳ ಪ್ರಕಾರ ಇವರೇ ಶೇಮನ ವಂಶದವರು.** ಈ ಪದವಿನ್ಯಾಸವು ಯೆಫೆತ್ ಮತ್ತು ಹಾಮನ ಸಂತಾನದವರ ಪಟ್ಟಿ ಮಾಡುವ ವೇಳೆ ಬಳಸಿದ ಪದವಿನ್ಯಾಸದಂತೆಯೇ ಇರುತ್ತದೆ (10:5, 20). ಆ ಸಾರಾಂಶಗಳು ಸಹ "ಕುಲ," "ಭಾಷೆ," "ದೇಶಗಳು," "ಜನಾಂಗಗಳು" ಎಂಬುದಾಗಿ ಪ್ರಸ್ತಾಪಿಸುತ್ತವೆ.

## ನೋಹನ ಪುತ್ರರ ಕುರಿತು ಒಂದು ಸಾರಾಂಶದ ಹೇಳಿಕೆ (10:32)

**32 ಸಂತತಿ ಜನಾಂಗಗಳ ಪ್ರಕಾರ ಇವರೇ ನೋಹನ ವಂಶದವರು. ಜಲಪ್ರಳಯವಾದನಂತರ ಭೂಮಿಯ ಮೇಲೆ ಹರಡಿಕೊಂಡ ಜನಾಂಗಗಳವರು ಇವರೇ.**

**ವಚನ 32.** ಅಧ್ಯಾಯವು ವಿಭಾಗದಲ್ಲಿರುವ ವಿಷಯ ಮತ್ತು ಉದ್ದೇಶದ ಕುರಿತಾಗಿ ಅಂತಿಮವಾದ ಸಾರಾಂಶವನ್ನು ಪುನಃ ಒತ್ತಿ ಹೇಳುತ್ತದೆ. ನಿರ್ದಿಷ್ಟವಾದ **ವಂಶಾ**ವಳಿಗಳನ್ನು ಪಟ್ಟಿ ಮಾಡುವ ಮೂಲಕ ಲೇಖಕನು ಹೇಗೆ **ನೋಹನ ಸಂತತಿ**ಯವರು **ಜನಾಂಗ**ಗಳಾಗಿ ಬೆಳೆದರು ಮತ್ತು **ಜಲಪ್ರಳಯವಾದನಂತರ ಭೂಮಿಯ ಮೇಲೆ** ಈ **ಜನಾಂಗಗಳವರು** ಹೇಗೆ **ಹರಡಿಕೊಂಡ**ರು ಎಂಬುನ್ನು ತೋರಿಸಿ ಕೊಡುತ್ತಾನೆ. ಭೂಮಿಯನ್ನು ಪುನಃ ಜನರಿಂದ ತುಂಬಿಸುವುದು "ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ" ಎಂಬ ದೇವರಾ ಆಜ್ಞೆಗೆ ಅನುಗುಣವಾಗಿತ್ತು (9:1; ನೋಡಿರಿ 9:7).

ಈ ಸಾರಾಂಶವು 11ನೇ ಅಧ್ಯಾಯದಲ್ಲಿ ಬರುವ ಬಾಬೆಲ್ ಗೋಪುರದ ಕಥಾನಿರೂಪಣೆಗೆ ವೇದಿಕೆಯನ್ನು ಸಿದ್ಧಗೊಳಿಸುತ್ತದೆ, ಅದು ನಾವೆಯೊಳಗೆ ಸಂರಕ್ಷಿಸಲ್ಪಟ್ಟಿದ್ದ ಈ ಕುಟುಂಬವು ದೇವರಿಂದ ಶುದ್ಧೀಕರಿಸಲ್ಪಟ್ಟಿದ್ದ ಲೋಕದಲ್ಲೆಲ್ಲಾ ಹರಡಿಕೊಂಡ ಹಾಗೆ ವಿವಿಧ "ಜನಾಂಗಗಳು" ಮತ್ತು "ಭಾಷೆಗಳು" ಇವುಗಳನ್ನು ಹೊಂದಿರುವ ವ್ಯತ್ಯಾಸವಾದ ಲೋಕವೊಂದು ಅಭಿವೃದ್ಧಿಗೊಂಡಿತು ಎಂಬುದನ್ನು ಬಣ್ಣಿಸುತ್ತದೆ.

# ಅನ್ವಯಿಸುವಿಕೆ

## ಜನಾಂಗಗಳ ಕೋಷ್ಟಕ (ಅಧ್ಯಾಯ 10)

ಮೊದಲ ನೋಟದಲ್ಲಿ, ಅದಿಕಾಂಡ 10ರಲ್ಲಿ ಸಿಕ್ಕುವ ವಂಶಾವಳಿಯ ನಮೂನೆಯು ದೈವಶಾಸ್ತ್ರೀಕ ಅನ್ವಯಿಸುವಿಕೆಯ ವಿಷಯದಲ್ಲಿ ಮಾತ್ರವೇ ಸೀಮಿತವಾಗಿದೆ ಎಂಬಂತೆ ಕಾಣಿಸುತ್ತದೆ. ಈ ಪಟ್ಟಿಯು ಪ್ರಮುಖವಾಗಿ ಹೆಸರುಗಳನ್ನು ಕೊಡುತ್ತದೆ, ಹೆಚ್ಚುಕಡಿಮೆ ಯಾವದೇ ಇತಿಹಾಸವನ್ನು ತಿಳಿಸುವದಿಲ್ಲ, ಒಬ್ಬ ವ್ಯಕ್ತಿಯು ಮಾತ್ರವೇ ಇದಕ್ಕೆ ಹೊರತಾಗಿರುತ್ತಾನೆ: ನಿಮ್ರೋದ. ಈ ವಾಕ್ಯಭಾಗವು ಜನರ ಜೀವಿತಗಳ ಕುರಿತಾದ ಯಾವದೇ ಕಾಲಕ್ರಮಾನುಸಾರವನ್ನು ಒಳಗೊಂಡಿರುವದಲ್ಲ, ಅವರು ಯಾವಾಗ ಮಕ್ಕಳಿಗೆ ಜನ್ಮ ನೀಡಿದರು, ಅಥವಾ ಅವರು ಮರಣಿಸುವ ವೇಳೆ ಎಷ್ಟು ವಯಸ್ಸಿನವರಾಗಿದ್ದರು (5ನೇ ಅಧ್ಯಾಯದಲ್ಲಿ ಕಾಣಿಸಿಕೊಳ್ಳುವ ರೀತಿಯಲ್ಲಿ) ಎಂಬುದನ್ನು ತಿಳಿಸುವದಿಲ್ಲ. ಈ ಮಿತಿಗಳ ಹೊರತಾಗಿಯೂ, ಕೆಲವು ಬೆಲೆಯುಳ್ಳ ಪಾಠಗಳನ್ನು ಈ ವಂಶಾವಳಿಯ ಕಥನದಿಂದ ಕಲಿತುಕೊಳ್ಳಬಹುದಾಗಿದೆ.

*ಯೆಹೋವ ದೇವರು ಸಕಲ ಜನಾಂಗಗಳ ಮೇಲೆ ಸಾರ್ವಭೌಮನಾಗಿದ್ದಾನೆ.* ದೇವರು ಜನಾಂಗಗಳನ್ನು ವ್ಯವಸ್ಥೆಗೊಳಿಸಿದನು ಮತ್ತು ಇಡೀ ಲೋಕದ ಮೇಲೆ ಸರ್ವೋನ್ನತನಾಗಿ ಆಳ್ವಿಕೆ ಮಾಡುತ್ತಾನೆ. ಇಲ್ಲಿ ಮೋಶೆಯು ನುಡಿದ ಒಂದು ಹೇಳಿಕೆಯು ಸೂಕ್ತವೆನಿಸುತ್ತದೆ: "ಪರಾತ್ಪರನಾದ ದೇವರು ಜನಾಂಗಗಳನ್ನು ಬೇರೆ ಬೇರೆ ಮಾಡಿ ಅವರವರಿಗೆ ಸ್ವದೇಶಗಳನ್ನು ನೇಮಿಸಿಕೊಟ್ಟಾಗ ಇಸ್ರಾಯೇಲ್ಯರ ಸಂಖ್ಯೆಗೆ ತಕ್ಕಂತೆ ಆಯಾ ಜನಾಂಗಕ್ಕೆ ಒಂದೊಂದು ಪ್ರದೇಶವನ್ನು ಗೊತ್ತು ಮಾಡಿದ್ದೂ" (ಧರ್ಮೋಪದೇಶಕಾಂಡ 32:8; ನೋಡಿರಿ ಆಮೋಸ 9:7, 8). ಪೌಲನು ಅಥೇನೆಯವರನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಇದೇ ರೀತಿಯ ಹೇಳಿಕೆಯು ಕಂಡು ಬರುತ್ತದೆ: ಜನಾಂಗಗಳ ವಿಷಯವಾಗಿ ಆತನು ಘೋಷಿಸುತ್ತಾ ಹೇಳಿದ್ದೇನೆಂದರೆ, ದೇವರು "ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನೂ ಅವರವರ ನಿವಾಸಗಳ ಮೇರೆಗಳನ್ನೂ ನಿಷ್ಕರ್ಷಿಸಿ ಭೂಮಂಡಲದಲ್ಲೆಲ್ಲಾ ವಾಸಮಾಡಿದನು" (ಅಪೊಸ್ತಲರ ಕೃತ್ಯಗಳು 17:26). "ಮನುಷ್ಯ"

ಎಂಬುದಕ್ಕಿರುವ ಪದವು ಗ್ರೀಕ್ ವಾಕ್ಯದಲ್ಲಿ ಕಾಣಿಸಿಕೊಳ್ಳುವದಿಲ್ಲ ಆದರೆ ಬಹುಶಃ ಅದು ಇರುವದೆಂದು ಅರ್ಥಮಾಡಿಕೊಳ್ಳತಕ್ಕದ್ದು. ಕೆಲವರು "ಒಬ್ಬನಿಂದಲೇ" ಎಂದರೆ ಆದಾಮನು ಎಂಬುದಾಗಿ ವ್ಯಾಖ್ಯಾನಿಸುತ್ತಾರೆ, ಖಂಡಿತವಾಗಿಯೂ ಇದರ ಸಾಧ್ಯತೆಯಿರುತ್ತದೆ. ಇನ್ನು ಕೆಲವರು ಇಲ್ಲಿ ಪೌಲನು ನೋಹನನ್ನು ಉಲ್ಲೇಖಿಸುತ್ತಿದ್ದಾನೆ, ಪ್ರಳಯದ ನಂತರದಲ್ಲಿ ಹುಟ್ಟಿದ ಸಕಲ ಜನಾಂಗಗಳಿಗೆ ಒಂದು ವಿಧವಾದ ಎರಡನೆಯ ಆದಾಮ ಮತ್ತು ಮೂಲ - ಆತನ ಮೂವರು ಪುತ್ರರ ಮೂಲಕವಾಗಿ - ಎಂಬಂತೆ ತಿಳಿಸುತ್ತಿದ್ದಾನೆಂದು ನಂಬುತ್ತಾರೆ.

10ನೇ ಅಧ್ಯಾಯದ ವಂಶಾವಳಿಯು 11ನೇ ಅಧ್ಯಾಯದಲ್ಲಿ ಆರಂಭವಾಗುವ ದೇವರ ವಿಮೋಚನಾ ಕಥೆಗೆ ಒಂದು ಮುನ್ನುಡಿಯಾಗಿ ಆದಿಕಾಂಡದೊಳಗೆ ಇರುತ್ತದೆ. ಅಬ್ರಹಾಮ ಮತ್ತು ಆತನ ಸಂತತಿಯವರು ಅಂತಿಮವಾಗಿ ಇಸ್ರಾಯೇಲ್ ಜನಾಂಗವಾಗುವರು ಮತ್ತು ಮೆಸ್ಸೀಯನನ್ನು ಉದಯಿಸುವಂತೆ ಮಾಡುವರು, ಈತನು ದೇವರ ಕುಮಾರನು ಮತ್ತು "ಲೋಕದ ರಕ್ಷಕನು" (ಯೋಹಾನ 4:42). ಹೇಗೂ, ಒಬ್ಬ ನಿರ್ದಿಷ್ಟ ವ್ಯಕ್ತಿಯೊಂದಿಗೆ ಮತ್ತು ಒಂದು ಆದುಕೊಂಡ ಜನಾಂಗದೊಂದಿಗೆ ದೇವರ ಸಂಬಂಧದ ಕಥೆಯು ಅನೇಕ ಕುಟುಂಬಗಳು, ಜನಾಂಗಗಳು, ಮತ್ತು ದೇಶಗಳು ಎಂಬ ಅಂತರ್ ರಾಷ್ಟ್ರೀಯ ಸನ್ನಿವೇಶದಲ್ಲಿ ಇಡಲ್ಪಟ್ಟಿರುತ್ತದೆ. ಪ್ರಳಯದ ನಂತರದಲ್ಲಿ, ದೇವರು ನೋಹ ಮತ್ತು ಆತನ ಪುತ್ರರಿಗೆ ಹೀಗೆ ಹೇಳಿದನು, "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಲೋಕದಲ್ಲೆಲ್ಲಾ ತುಂಬಿಕೊಳ್ಳಿರಿ" (9:1); ಮತ್ತು 10ನೇ ಅಧ್ಯಾಯದ ವಂಶಾವಳಿಯು ಈ ವಿಷಯದಲ್ಲಿ ಅವರು ಉತ್ತಮ ಆರಂಭವನ್ನು ಮಾಡಿದರು ಎಂಬುದಾಗಿ ನಮಗೆ ತಿಳಿಸುತ್ತದೆ. ಪುನಃ ಪುನಃ, ವಾಕ್ಯವು ಈ ಜನರು ಮತ್ತು ದೇಶಗಳವರು ಪ್ರತ್ಯೇಕಗೊಳ್ಳುವುದು ಮತ್ತು ಹರಡಿಕೊಳ್ಳುವುದರ ಕುರಿತು ಉಲ್ಲೇಖಿಸುತ್ತದೆ:

> ಇವರು ಸಮುದ್ರದ ರೇವುಗಳಲ್ಲಿ ಹರಡಿಕೊಂಡರು. ದೇಶಭಾಷಾ ಕುಲಜನಾಂಗಗಳ ಪ್ರಕಾರ ... ಕಾಲಕ್ರಮದಿಂದ ಈ ಕಾನಾನ್ ಕುಲಗಳವರು ಹರಡಿಕೊಂಡರು (10:5-18).

ಅಂತಿಮವಾಗಿ, ಲೇಖಕನು ವಿಭಾಗವನ್ನು ಸಾರಾಂಶಗೊಳಿಸುತ್ತಾ ಹೀಗೆ ಹೇಳಿದನು, "ಸಂತತಿ ಜನಾಂಗಗಳ ಪ್ರಕಾರ ಇವರೇ ನೋಹನ ವಂಶದವರು. ಜಲಪ್ರಳಯವಾದ ನಂತರ ಭೂಮಿಯ ಮೇಲೆ ಹರಡಿಕೊಂಡ ಜನಾಂಗಗಳವರು ಇವರೇ" (10:32). ದೇವರು ಇತಿಹಾಸದ ಕರ್ತನಾಗಿ ತನ್ನ ಅಂತಿಮವಾದ ಉದ್ದೇಶಗಳನ್ನು ನೆರವೇರಿಸುವದಕ್ಕಾಗಿ ಜನಾಂಗಗಳನ್ನು ಪ್ರತ್ಯೇಕಗೊಳಿಸಿ ಅವರ ನಿವಾಸದ ಮೇರೆಗಳನ್ನು ಗೊತ್ತುಪಡಿಸುವ ಮೂಲಕ ದೈವಸಂಕಲ್ಪಾನುಸಾರ ಕೆಲಸ ಮಾಡಿದನು.

*ಒಂದೇ ಮಾನವ ಕುಟುಂಬದಿಂದಲೇ ಎಲ್ಲಾ ಜನಾಂಗಗಳು ಬರುವಂತಾಗುವ ಹಾಗೆ ದೇವರು ಲೋಕವನ್ನು ವಿನ್ಯಾಸಗೊಳಿಸಿದನು.* ನೋಹ ಮತ್ತು ಆತನ ಪುತ್ರರು ಮಾನವ ಜನಾಂಗದ ಜನಕರಾಗಿದ್ದರಿಂದ, ಮತ್ತು ಸಕಲ ಮಾನವ ಕುಲದ ಸಕಲ ಕುಟಂಬಗಳು ಶೆಮ್, ಹಾಮ್, ಯೆಫೆತ್ ಇವರ ಪೂರ್ವಿಕತೆಯೊಳಗಿಂದ ಉದಯಿಸಿರುತ್ತವಾದ್ದರಿಂದ, ಯಾವ ದೇಶ ಅಥವಾ ಜನಾಂಗೀಯ ಗುಂಪಾಗಲಿ ತನ್ನನ್ನು ಮಿಕ್ಕ ಕುಲ ಅಥವಾ ಜನಾಂಗಕ್ಕಿಂತ ಶ್ರೇಷ್ಠ ಎಂಬುದಾಗಿ ಹೇಳಿಕೊಳ್ಳಲು ಸಾಧ್ಯವಿರುವದಿಲ್ಲ. ಕೆಲವು ದೇಶಗಳು ಭೌತಿಕವಾಗಿ, ರಾಜಕೀಯವಾಗಿ, ಮತ್ತು ಆರ್ಥಿಕವಾಗಿ ಮಿಕ್ಕ ದೇಶಗಳಿಗಿಂತ ಪ್ರಗತಿಯನ್ನು ಸಾಧಿಸಿರುತ್ತವಾದರೂ, ಈ ಕ್ಷೇತ್ರಗಳಲ್ಲಿ ಅವರು ಮಾಡಿರುವ ಸಾಧನೆಗಳಿಂದಾಗಿ ಅವರು ಬೇರೆ ಜನಾಂಗಗಳಿಗಿಂತ ಉತ್ತಮರು ಅಥವಾ ಅವರ ಯಶಸ್ಸಿನ ಕಾರಣದಿಂದಾಗಿ ದೇವರಿಗೆ

ಹೆಚ್ಚು ಮೆಚ್ಚಿಕೆಯಾದವರು ಎಂಬುದನ್ನು ಸಾಭಿತುಪಡಿಸುವದಿಲ್ಲ (ಜ್ಞಾನೋಕ್ತಿ 22:1, 2). ವರ್ಣಭೇದವು ದೇವರಿಗೆ ಎಂದಿಗೂ ಸಹಿಸಿಕೊಳ್ಳಲಾಗದ ಸಂಗತಿಯಾಗಿದೆ. ಧರ್ಮಶಾಸ್ತ್ರದಡಿಯಲ್ಲಿ, ಇಸ್ರಾಯೇಲ್ಯರಿಗೆ ಅವರ ಇಬ್ರಿಯ ನೆರೆಯವರನ್ನು ತಮ್ಮಂತೆಯೇ ಪ್ರೀತಿಸಬೇಕೆಂದು ಆಜ್ಞಾಪಿಸಿದ್ದು ಮಾತ್ರವೇ ಅಲ್ಲ, ಆದರೆ "ಪರದೇಶದವನನ್ನು" (גֵּר, *ಗೆರ,* ಅಂದರೆ "ಅಪರಿಚಿತ" ಅಥವಾ "ಅನ್ಯಜನಾಂಗದವನು") ಸಹ ಪ್ರೀತಿಸಬೇಕೆಂದು ಆಜ್ಞಾಪಿಸಿದನು (ಯಾಜಕಕಾಂಡ 19:18, 33, 34; ನೋಡಿರಿ ಮತ್ತಾಯ 28:18-20; ಮಾರ್ಕ 11:17; ಅಪೊಸ್ತಲರ ಕೃತ್ಯಗಳು 10:35, 36).

*ಮಾನವ ಗರ್ವ ಮತ್ತು ಆಕಾಂಕ್ಷೆಯ ಸ್ಮಾರಕಗಳೊಳಗೆ ಅವರ ಸ್ವಂತ ನಾಶನದ ಬೀಜಗಳನ್ನು ಹೊಂದಿವೆ ಎಂಬುದನ್ನು ದೇವರು ದೃಷ್ಟಾಂತಪಡಿಸಿದನು.* ಕಾಯಿನನ ಸಂತಾನದವರು ಸಂಸ್ಕೃತಿಗಳ ಸ್ಥಾಪಕರಾಗಿದ್ದರು. ಅವರು ಪಟ್ಟಣಗಳನ್ನು ಕಟ್ಟಿದರು ಮತ್ತು ಸಂಗೀತ ವಾದ್ಯಗಳನ್ನು, ಕಲೆಗಳನ್ನು ಸೃಷ್ಟಿಸಿದರು, ಮತ್ತು ಹಿತ್ತಾಳೆ ಹಾಗೂ ಕಬ್ಬಿಣದ ಸಾಧನಗಳನ್ನು ಕಂಡು ಹಿಡಿದರು (4:17:22). ಹೇಗೂ, ಅವರು ತಮ್ಮ ಜೊತೆಯ ಮನುಷ್ಯರನ್ನು ಕೊಂದದ್ದು ಮಾತ್ರವೇ ಅಲ್ಲ ಆದರೆ ತಮ್ಮ ದುಷ್ಕೃತ್ಯಗಳಲ್ಲಿ ಹೆಮ್ಮೆಪಟ್ಟುಕೊಂಡಂಥ ಜನರ ಒಂದು ದುರಂತಕರ ಗುಂಪೊಂದನ್ನು ಹುಟ್ಟಿಕೊಳ್ಳುವಂತೆ ಸಹ ಮಾಡಿದ್ದರು (4:23, 24; 6:1-5, 11).

10ನೇ ಅಧ್ಯಾಯದ ವಂಶಾವಳಿಯಲ್ಲಿ, ನಿಮ್ರೋದನ ಕೃತ್ಯಗಳ ಬಗ್ಗೆ ಮಾತ್ರವೇ ಬರೆಯಲಾಗಿರುತ್ತದೆ. ಆತನು "ಪರಾಕ್ರಮದಿಂದ ಮೊದಲನೆಯ ಭೂರಾಜನಾದನು" ಎಂದು ಕರೆಯಲ್ಪಟ್ಟಿದ್ದಾನೆ (10:8), ಆದರೆ ಆತನ ಏಕೈಕ ಪರಂಪರೆ ಎಂದರೆ ಅದು ಬೇಟೆಯಾಡುವಿಕೆ ಮತ್ತು ಕಟ್ಟಡ ನಿರ್ಮಾಣಗಳ ಕ್ಷೇತ್ರದಲ್ಲಿಯೇ ಆಗಿತ್ತು. ಆತನು ಬಾಬೆಲ್ (ಬಾಬಿಲೋನ), ನಿನೆವೆ, ಮತ್ತು ಮೆಸಪೋತಾಮ್ಯದ ಕಣಿವೆಯಲ್ಲಿ ಇತರ ನಗರಗಳನ್ನು ಕಟ್ಟಿಸಿದ್ದು ಇವುಗಳ ಹಳೆಯ ಒಡಂಬಡಿಕೆಯ ಇತಿಹಾಸದೊಳಗೆ ಅನಂತರದಲ್ಲಿ ಸಕಲ ವಿಧವಾದ ಪಾಪಗಳಿಗೋಸ್ಕರ ಮತ್ತು ಹಿಂಸಾಕೃತ್ಯಗಳಿಗೋಸ್ಕರ ಕುಖ್ಯಾತಗೊಂಡವು. ಈ ಅಧ್ಯಾಯದಲ್ಲಿ ನಿಮ್ರೋದನ ಸೇರ್ಪಡೆಯು 11:1-9ರಲ್ಲಿರುವ ಬಾಬೆಲ್ ಗೋಪುರ ಕಥಾನಿರೂಪಣೆಗೆ ವೇದಿಕೆಯನ್ನು ಸಿದ್ಧಗೊಳಿಸುತ್ತದೆ. ಇದು ಸಾಂಸ್ಕೃತಿಕ ಪ್ರಗತಿಗಳು - ತಂತ್ರಜ್ಞಾನ, ನಗರಗಳು, ಗೋಪುರಗಳು, ಮತ್ತು ಇತ್ಯಾದಿಗಳು - ಅನೇಕ ಸಾರಿ ಗರ್ವ ಮತ್ತು ದುರಹಂಕಾರಗಳೊಳಗಿಂದಲೇ ಉದಯಿಸುತ್ತವೆಂಬುದನ್ನು ಇದು ಜ್ಞಾಪಕಪಡಿಸುವದಾಗಿದೆ. ಸತ್ಯ ದೇವರನ್ನು ಮತ್ತು ಆತನ ಚಿತ್ತವನ್ನು ನಿರ್ಲಕ್ಷಿಸುವ ಯಾವದೇ ಪ್ರಗತಿಯು ಅಂತಿಮವಾಗಿ ಮಾನವರಿಗೆ ವಿನಾಶಕಾರಿ ಮತ್ತು ಕೀಳುಮಟ್ಟಕ್ಕೆ ಕೊಂಡೊಯ್ಯುವಂಥದ್ದು ಆಗಬಲ್ಲದು. ಈ ವಿಧವಾದ ಚಟುವಟಿಕೆಯು ಪಂಗಡಗಳನ್ನುಂಟು ಮಾಡುವದಾಗಿದೆ; 10:25ರಲ್ಲಿ ಪೆಲೆಗನ ಕುರಿತಾದ ಹೇಳಿಕೆ, "ಅವನ ಕಾಲದಲ್ಲಿ ಭೂಮಿಯ ಜನಗಳು ವಿಂಗಡವಾದವು" ಎಂಬುದು ಮುಂದೆ 11:1-9ರಲ್ಲಿ ಬರಲಿರುವ ಸಂಗತಿಗೆ ನಮ್ಮನ್ನು ಅದೇ ರೀತಿಯಲ್ಲಿಯೇ ಸಿದ್ಧಗೊಳಿಸುತ್ತದೆ.

## ಎಲ್ಲಾ ಜನಾಂಗಗಳು (10:5, 20, 31, 32)

ಅರಿಯೋಪಾಗದಲ್ಲಿ ನಿಂತವನಾಗಿ, ಪೌಲನು ಅಥೇನೆಯ ಜನರಿಗೆ ಹೀಗೆ ಹೇಳಿದನು, "ಆತನು [ದೇವರು] ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನೂ ಅವರವರ ನಿವಾಸಗಳ ಮೇರೆಗಳನ್ನೂ ನಿಷ್ಕರ್ಷಿಸಿ ಭೂಮಂಡಲದಲ್ಲೆಲ್ಲಾ ವಾಸಮಾಡಿದನು" (ಅಪೊಸ್ತಲರ ಕೃತ್ಯಗಳು 17:26). ಈತನ ಹೇಳಿಕೆಯು ಆದಿಕಾಂಡ

10:32ನ್ನು ಜ್ಞಾಪಿಸುತ್ತದೆ: "[ನೋಹನ ವಂಶದವರೊಳಗಿಂದ] ಜಲಪ್ರಳಯವಾದನಂತರ ಭೂಮಿಯ ಮೇಲೆ ಹರಡಿಕೊಂಡ ಜನಾಂಗಗಳವರು ಇವರೇ."

ಎಲ್ಲಾ ಜನರು ಒಂದೇ ವಂಶಸ್ಥರಿಂದ ಬಂದಿರುವ ಪ್ರಕಾರವೇ, ಎಲ್ಲರಿಗೂ ಒಂದೇ ವಿಧವಾದ ಅಗತ್ಯತೆಗಳು ಇರುತ್ತವೆ. ಈ ಸಮಾನತೆಯನ್ನು ಕುರಿತು ಮಾತಾಡುವ ವೇಳೆ, ಪೌಲನು ಆಹಾರ, ಉಡುಪು, ಮತ್ತು ಆಶ್ರಯಗಳಂತಹ ಶಾರೀರಿಕ ಅಗತ್ಯತೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಲಿಲ್ಲ. ಆತನ ಕಳಕಳಿಯು ಪ್ರತಿಯೊಬ್ಬರ ವಿಷಯದಲ್ಲಿ ಏನಾಗಿತ್ತೆಂದರೆ "ಒಂದು ವೇಳೆ ಅವರು ತಡವಾಡಿ ಕಂಡುಕೊಂಡಾರೇನೋ ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು. ಆತನು ನಮ್ಮಲ್ಲಿ ಒಬ್ಬನಿಗೂ ದೂರವಾದವನಲ್ಲ" ಎಂಬುದೆ (ಅಪೊಸ್ತಲರ ಕೃತ್ಯಗಳು 17:27).

*ಎಲ್ಲಾ ದೇಶಗಳಿಗೂ ಸುವಾರ್ತೆಯ ಅಗತ್ಯವಿದೆ.* ಕ್ರಿಸ್ತನು ತನ್ನ ಹಿಂಬಾಲಕರಿಗೆ "ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿರಿ" ಎಂದು ಆದೇಶಿಸಿದನು (ಮತ್ತಾಯ 28:19). ಪ್ರತಿಯೊಬ್ಬ ವ್ಯಕ್ತಿಗೂ ಸುವಾರ್ತೆಯನ್ನು ಆಲಿಸುವ ಮತ್ತು ಕ್ರಿಸ್ತನಲ್ಲಿ ನಂಬಿಕೆಯನ್ನು ಬೆಳೆಸಿಕೊಳ್ಳಲು, ಆ ನಂಬಿಕೆಯನ್ನು ಅರಿಕೆ ಮಾಡಲು, ಮತ್ತು ಪಾಪಕ್ಕಾಗಿ ಪಶ್ಚಾತ್ತಾಪಪಟ್ಟು ಕ್ಷಮಾಪಣೆಗೋಸ್ಕರ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಸದವಕಾಶದ ಅಗತ್ಯವಿರುತ್ತದೆ (ಅಪೊಸ್ತಲರ ಕೃತ್ಯಗಳು 2:38; ರೋಮಾ 10:8-14). ಏಕೆ? ಏಕೆಂದರೆ ಒಂದು ದಿನ ನ್ಯಾಯತೀರ್ಪಿಗೋಸ್ಕರ ದೇವರ ಮುಂದೆ "ಎಲ್ಲಾ ದೇಶಗಳ ಜನರು ... ಕೂಡಿಸಲ್ಪಡುವರು" (ಮತ್ತಾಯ 25:32; ನೋಡಿರಿ ಪ್ರಕಟನೆ 7:9).

*ಎಲ್ಲಾ ದೇಶಗಳಿಗೂ ಕ್ರಿಸ್ತನ ಅಗತ್ಯವಿದೆ.* ಎಲ್ಲರೂ ಪಾಪ ಮಾಡಿದ್ದಾರೆ, ಆದ್ದರಿಂದ ಪ್ರತಿಯೊಂದು ದೇಶದಲ್ಲಿರುವ ಜನರು ಪಾಪದ ಸಂಬಳದಿಂದ ತಪ್ಪಿಸಿಕೊಂಡು ರಕ್ಷಣೆ ಹೊಂದುವ ಅಗತ್ಯವಿದೆ (ರೋಮಾ 3:23; 6:23). "ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು [ದೇವರ] ಚಿತ್ತವಾಗಿದೆ" (1 ತಿಮೊಥೆ 2:4), ಮತ್ತು ಇದು ಕ್ರಿಸ್ತನಲ್ಲಿ ಮಾತ್ರವೇ ಸಂಭವಿಸಬಲ್ಲದು. ನಮ್ಮ ಪಾಪಗಳನ್ನು ನಿವಾರಣಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣಮಾಡುತ್ತಾನೆ" (1 ಯೋಹಾನ 2:2).[33]

---

ಅಡಿಟಿಪ್ಪಣಿಗಳು

[1]ಸಂಖ್ಯೆ "ಎಪ್ಪತ್ತು" ಹಲವಾರು ಪ್ರಾಮುಖ್ಯವಾದ ಸನ್ನಿವೇಶಗಳಲ್ಲಿ ಕಾಣಿಸಿಕೊಳ್ಳುತ್ತದೆ: ಯಾಕೋಬನ ಕುಟುಂಬದ ಎಪ್ಪತ್ತು ಸದಸ್ಯರು ಐಗುಪ್ತಕ್ಕೆ ಇಳಿದು ಹೋಗಿ ನೆಲೆಸಿದರು (46:27); ಅರಣ್ಯದಲ್ಲಿ ಅಲೆದಾಡುವ ವೇಳೆಯಲ್ಲಿ, ಇಸ್ರಾಯೇಲ್ಯರೊಳಗೆ ಎಪ್ಪತ್ತು ಮಂದಿ ಹಿರಿಯರಿದ್ದರು (ವಿಮೋಚನಕಾಂಡ 24:1); ಯೆಹೂದ್ಯರು ಎಪ್ಪತ್ತು ವರ್ಷಗಳ ಕಾಲ ಬಾಬಿಲೋನಿಗೆ ಸೆರೆಯಾಳುಗಳಾಗಿ ಕೊಂಡೊಯ್ಯಲ್ಪಟ್ಟಿದ್ದರು (ಯೆರೆಮೀಯ 25:11, 12; 29:10); ಮತ್ತು ಯೇಸುವು ಒಂದು ಮಿತವಾದ ಆದೇಶವನ್ನು ಕೊಟ್ಟು ಎಪ್ಪತ್ತು ಮಂದಿ ಶಿಷ್ಯರನ್ನು ಕಳುಹಿಸಿ ಕೊಟ್ಟನು (ಲೂಕ 10:1-17). ಅಲ್ಲದೆ, ಯೆರೂಸಲೇಮಿನಲ್ಲಿದ್ದ ಯೆಹೂದಿ ಹಿರೀ ಸಭೆಯೊಳಗೆ ಎಪ್ಪತ್ತು ಮಂದಿ ಸದಸ್ಯರಿದ್ದರು. (Mishnah *Sanhedrin* 1.6.) [2]Kenneth A. Mathews, *Genesis 1—11:26*, The New American Commentary, vol. 1A (Nashville: Broadman & Holman Publishers, 1996), 434. [3]Daniel I. Block, "Table of Nations," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 4:708. [4]Victor P. Hamilton, "מִצְרַיִם," in *TWOT*, 1:523. [5]ನಾವು 5ನೇ ಅಧ್ಯಾಯದಲ್ಲಿ ವಂಶಾವಳಿಯ ಬರಹಗಳಲ್ಲಿ ನೋಡಿದ ಹಾಗೆಯೇ, ವಂಶಾವಳಿಗಳು ಅನೇಕ ಸಾರಿ ಆಯ್ದ ವ್ಯಕ್ತಿಗಳನ್ನು ಹೊಂದಿರುತ್ತಿದ್ದವು. ಲೇಖಕರು ಕೆಲವು ಸಾರಿ ಪಟ್ಟಿ

ಮಾಡುವದಕ್ಕಾಗಿ ಹೆಚ್ಚು ಪ್ರಾಮುಖ್ಯರಾದ ವ್ಯಕ್ತಿಗಳನ್ನಷ್ಟೇ ಆರಿಸಿಕೊಳ್ಳುತ್ತಿದ್ದರು ಮತ್ತು ಹೆಸರುಗಳ ಸಂಖ್ಯೆಯನ್ನು ಅನೇಕ ಸಾರಿ "7" ಅಥವಾ "7"ರ ಗುಣಕಾರಗಳಿಗೆ ಸೀಮಿತಗೊಳಿಸುತ್ತಿದ್ದರು. [6]Alan Ralph Millard, "Medes," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1986), 3:297. [7]Josephus *Antiquities* 1.6.1. [8]K. A. Kitchen, "Cush," in *The New Bible Dictionary*, ed. J. D. Douglas (Grand Rapids, Mich.: Wm. B. Eerdmans Publishing Co., 1962), 284. [9]William Sanford LaSor, "Sabeans," in *The International Standard Bible Encyclopedia*, 4:255. [10]ನೋಡಿರಿ 2 ಸಮುವೇಲ 7:8, 9; 12:7-12; 1 ಅರಸು 3:5-14; 11:9-11; 2 ಪೂರ್ವಕಾಲವೃತ್ತಾಂತ 36:23; ಎಜ್ರನು 1:1, 2; ಯೆಶಾಯ 45:1-4; ದಾನಿಯೇಲ 2:21, 37; 4:17, 24-33; ಯೋಹಾನ 19:10, 11.

[11]ಬಾಬೆಲ್ ಗೋಪುರ ನಿರ್ಮಾಣದಲ್ಲಿ ನಿಮ್ರೋದನು ಭಾಗಿಯಾಗಿರುವದಾದಲ್ಲಿ, ಆತನು ತನ್ನ ಮೊದಲ ಪ್ರಯತ್ನದಲ್ಲಿ ಯಶಸ್ವಿಯಾಗಿರಲಿಲ್ಲ ಎಂದಾಗುತ್ತದೆ; ಯಾಕೆಂದರೆ ಯೆಹೋವನು ಜನರನ್ನು ಕಿತ್ತೇಸೆದು ಲೋಕದಲ್ಲೆಲ್ಲಾ ಚದುರಿಸಿ ಬಿಟ್ಟನು (11:8, 9). ಹೇಗೂ, ಜನರು ಈಗಲೂ ಈ ಕಾಲಾವಧಿಯಲ್ಲಿ ಬಹಳ ದೂರದ ಸ್ಥಳಗಳಲ್ಲಿ ಜೀವಿಸುತ್ತಿದ್ದರು, ಮತ್ತು ಈತನು ಬಾಬೆಲ್‌ನ್ನು ತನ್ನ "ರಾಜ್ಯದ" ಆರಂಭವನ್ನಾಗಿ ಮಾಡುವದಕ್ಕಾಗಿ ಹಿಂದಿರುಗಿ ಬಂದಿರಬಹುದಾಗಿದೆ, ಅದರೊಳಗೆ ನಂತರದಲ್ಲಿ ಹೆಸರಿಸಲ್ಪಟ್ಟಿರುವ ಮೆಸಪೋತಾಮ್ಯದ ಪಟ್ಟಣಗಳು ಸೇರಿಕೊಂಡಿದ್ದವು (10:10-12). [12]NIVಯಲ್ಲಿರುವ ಗ್ರಂಥಪಾಠದ ಟಿಪ್ಪಣಿಯಯೊಳಗೆ "ನಿನೆವೆಯನ್ನು ಅದರ ಪಟ್ಟನದ ಚೌಕಗಳ ಸಮೇತ" ತಿಳಿಸಲಾಗಿದೆ. [13]Charles T. Fritsch, "Nineveh," in *The International Standard Bible Encyclopedia*, 3:538–39. [14]"ಲೂದ್" ಎಂಬುದರ ಬದಲಾಗಿ ಯೆಶಾಯ 66:19ರಲ್ಲಿ, NIVಯು "ಲೂದ್ಯರು" ಎಂದು ಬಳಸುತ್ತದೆ. ಲೂದ್ಯರು ಪಶ್ಚಿಮದ ಆಸ್ಯ ಸೀಮೆಯಲ್ಲಿ ಜೀವಿಸುತ್ತಿದ್ದರು. [15]K. A. Kitchen, "Naphtuhim," in *The New Bible Dictionary*, 865. [16]ನೋಡಿರಿ Alfred J. Hoerth, *Archaeology of the Old Testament* (Grand Rapids, Mich.: Baker Books, 1998), 107. [17]George E. Mendenhall, "Amorites," in *The Anchor Bible Dictionary*, ed. David Noel Freedman (New York: Doubleday, 1992), 1:201–2. [18]Gordon J. Wenham, *Genesis 1—15*, Word Biblical Commentary, vol. 1 (Waco, Tex.: Word Books, 1987), 225. [19]John T. Willis, *Genesis*, The Living Word Commentary (Austin, Tex.: Sweet Publishing Co., 1979), 40. [20]Wenham, 225–26.

[21]Different spellings of the region exist in the Synoptic Gospels. See Sellers Crain, *Matthew 1—13*, Truth for Today Commentary (Searcy, Ark.: Resource Publications, 2010), 290. [22]LXXನ ಅನುವಾದಕರು ಕೆಲವು ಸಾರಿ "ಹೋರಿಯರು" ಎಂಬ ಹೆಸರನ್ನು "ಹಿವ್ವೀಯರು" ಎಂಬ ಹೆಸರೆಂದು ಗಲಿಬಿಲಿ ಮಾಡಿಕೊಂಡಿರುತ್ತಾರೆ. ಇದು ಎರಡು ಇಬ್ರಿಯ ಅಕ್ಷರಗಳನ್ನು ತಪ್ಪಾಗಿ ಓದುವದರಿಂದ ಸುಲಭವಾಗಿ ತಪ್ಪಾಗಿರಬಹುದಾಗಿದೆ, ಆ ಪದಗಳು ಯಾವವೆಂದರೆ *ರೆಶ್* (ר, *r*) ಮತ್ತು *ವಾವ್* (ו, *w*), ಇವುಗಳು ಆಕಾರದಲ್ಲಿ ಒಂದೇ ರೀತಿಯಲ್ಲಿರುತ್ತವೆ, ವಿಶೇಷವಾಗಿ ಹಸ್ತಪ್ರತಿ ನಕಲುಗಾರನು *ರೆಶ್* ಮೇಲಿರುವ ಸಮಾಂತರ ಗೆರೆಯನ್ನು ಅತಿ ಕುಳ್ಳವಾಗಿ ಅಥವಾ *ವಾವ್* ಮೇಲಿನ ಗೆರೆಯನ್ನು ಅತಿ ದೊಡ್ಡದಾಗಿ ಬರೆದಿದ್ದಲ್ಲಿ ಈ ತಪ್ಪು ಸಂಭವಿಸುವದಾಗಿತ್ತು. [23]ನೋಡಿರಿ ASV; RSV; NRSV; NEB; REB; TEV; NAB; JB; NJB; NJPSV; NCV; CEV; NLT; ESV. [24]ಹೇಗೂ, "ಹಿರೀ" ಎಂಬುದು "ಯೆಫೆತ್" ಬದಲಾಗಿ "ಅಣ್ಣ" ಎಂಬುದರ ಅರ್ಥವನ್ನು ವಿಸ್ತರಿಸಬಹುದಾಗಿದ್ದು, ಶೇಮನನ್ನು "ಯೆಫೆತ್‌ನ ಅಣ್ಣನು" ಎಂದಾಗಿಸುತ್ತದೆ (NASB). [25]U. Cassuto, *A Commentary on the Book of Genesis*, Part II, trans. Israel Abrahams (Jerusalem: Magnes Press, 1964), 165. [26]A. R. Millard, "Elam, Elamites," in *The New Bible Dictionary*, 355. [27]ಈ ಪ್ರಾಂತ್ಯವು "ಅಶ್ಶೂರ್" ಎಂದು ಕರೆಯಲ್ಪಡುವ ಕಾಲಕ್ಕೆ ಮುಂಚೆಯೇ ನಿಮ್ರೋದನು ಈ ಪ್ರಾಂತ್ಯದಲ್ಲಿ ನಗರಗಳನ್ನು ಕಟ್ಟಿರಬಹುದಾಗಿದೆ. ಇದೇ ರೀತಿಯಲ್ಲಿ, ಲೇಖಕನು ಏದೆನ್ ತೋಟದ ಕುರಿತಾಗಿ ಈ ಮುಂಚೆ ತಾನು ಬಣ್ಣಿಸುವ ವೇಳೆ "ಅಶ್ಶೂರ್" ಎಂಬ ಹೆಸರನ್ನು ಬಳಸಿದನು (2:14). [28]Josephus *Antiquities* 1.6.4. [29]Victor P. Hamilton, *The Book of Genesis: Chapters 1—17*, The New International Commentary on the Old Testament (Grand Rapids, Mich.: Wm. B. Eerdmans Publishing Co., 1990), 344. [30]Wenham, 231.

[31]W. W. Müller, "Jerah," in *The Anchor Bible Dictionary*, 3:683. [32]Mathews, 464. [33]ಈ ಅನ್ವಯಿಸುವಿಕೆಯು W. H. Griffith Thomas, *Genesis: A Devotional Commentary* (Grand Rapids, Mich.: Wm. B. Eerdmans Publishing Co., 1946), 104–5 ಮೇಲೆ ಆಧಾರವಾಗಿತ್ತು.